ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 10 ಸಂಚಿಕೆ 3-4 ಜನವರಿ 24, 1988 ಬೆಲೆ 1 ರೂ.

ಒಳಗಿನ ಪುಟಗಳಲ್ಲಿ

ರಾಜೀವ್‌ಗಾಂಧಿ ರಾಜೀನಾಮೆ ಒತ್ತಾಯಿಸಿ 8 ವಿರೋಧ ಪಕ್ಷಗಳ ಜಂಟಿ ಕರೆ

ಮಾರ್ಚ 15ರ "ಭಾರತ ಬಂದ್" ಯಶಸ್ವಿಗೊಳಿಸಿರಿ

ಹದಗೆಡುತ್ತಿರುವ ದೇಶದ, ಆರ್ಥಿಕ ಪರಿಸ್ಥಿತಿ, ಹೆಚ್ಚುತ್ತಿರುವ ಛಿದ್ರಕಾರಿ, ಭಯೋತ್ಪಾದಕರ ಹಾವಳಿ, ವಿಸ್ತೃತಗೊಳ್ಳುತ್ತಿರುವ ಮತೀಯ ದ್ವೇಷ-ಗಲಭೆಗಳು, ಸಾವಿರಾರು ಕಾರ್ಖಾನೆಗಳ ಮುಚ್ಚುವಿಕೆ, ರೈತರ ಫಸಲಿಕೆ ನ್ಯಾಯ ಬೆಲೆ, ನೀರಾವರಿ ಸಮಸ್ಯೆ ಹೀಗೆ ಜನ ಸಾಮಾನ್ಯರ ಹಲವಾರು ಸಮಸ್ಯೆಗಳಿಗೆ ಪರಿಹಾರ ಒದಗಿಸುವುದರಲ್ಲಿ, ದೇಶದ ಐಕ್ಯತೆ—ಸಮಗ್ರತೆಯನ್ನು ಕಾಪಾಡುವುದರಲ್ಲಿ ವಿಫಲಗೊಂಡ ರಾಜೀವಗಾಂಧಿಯವರು ರಾಜೀನಾಮೆ ಕೊಟ್ಟು ಮರು ಚುನಾವಣೆ ನಡೆಸಬೇಕೆಂದು ಒತ್ತಾಯಿಸಿ ಎಂಟು ವಿರೋಧ ಪಕ್ಷಗಳೂ, ವಿ. ಪಿ. ಸಿಂಗ್ ಅವರ ಜನಮೋರ್ಚಾವೂ ದೇಶದ ಜನತೆಗೆ ಕರೆ ಕೊಟ್ಟಿವೆ. ಎಡ ಪಕ್ಷಗಳು ಕರೆದ ಈ ಸಭೆಯಲ್ಲಿಜನಮೋರ್ಚಾ, ಜನತಾ, ಲೋಕದಳ (ಎ), ಪುರೋಗಾಮಿ ಪಕ್ಷ, ತೆಲುಗು ದೇಶಂ, ಕಾಂಗ್ರೆಸ್ (ಎಸ್) ಆರ್. ಎಸ್.ಪಿ. ಸಿ. ಪಿ. ಐ. ಮತ್ತು ಸಿ. ಪಿ. ಐ. (ಎಂ) ಪಕ್ಷಗಳ ಪ್ರತಿನಿಧಿಗಳು ಭಾರತ ಬಂದ್‌ಗೆ ಕರೆ ನೀಡಿವೆ. ಇದರ ಯಶಸ್ವಿಗಾಗಿ ಎಲ್ಲರೂ ದುಡಿಯೋಣ

ರಾಜೀವ್ ಗಾಂಧಿ ರಾಜಿನಾಮೆಗಾಗಿ ಪ್ರಚಾರ ಪ್ರಕ್ಷೋಭೆಯಲ್ಲಿ ಕಳೆದ ಐದು ತಿಂಗಳಲ್ಲಿ ಸತತ ಪ್ರಗತಿ ಕಂಡು ಬಂದಿದ್ದು ಒಂದು ತಿಂಗಳ ಭಾರತ ಜಾಥಾಗಳು ಹಾಗೂ ಚಾರಿತ್ರಿಕ ಡಿಸೆಂಬರ್ 9ರ ರ್‍ಯಾಲಿ ರಾಜೀವ್ ಗಾಂಧಿ ಸರ್ಕಾರದ ರಾಜೀನಾಮೆಗಾಗಿ ನಡೆದ ಅತ್ಯಂತ ದೊಡ್ಡ ಮತ ಪ್ರದರ್ಶನ. ಇದು ವಾತಾವರಣವನ್ನು ಚುರುಕು ಗೊಳಿಸಿ ರಾಜೀವ್ ಗಾಂಧಿ ರಾಜಿನಾಮೆಯ ಆಂದೋಲನವನ್ನು ವಿಸ್ತಾರ ಗೊಳಿಸಿದೆ. ಮಾತ್ರವಲ್ಲ, ತಾನು ವಿರೋಧ ಪಕ್ಷಗಳ ಮಿತ್ರ ಎಂಬ ಮುಖವಾಡ ಹೊತ್ತು ತನ್ನ ಛಿದ್ರಕಾರೀ ಚಟುವಟಿಕೆಗಳನ್ನು ನಡೆಸುತ್ತಿರುವ ಬಿ.ಜೆ.ಪಿ.ಯನ್ನು ದೂರ ಮಾಡುವಲ್ಲಿಯೂ ಯಶಸ್ವಿಯಾಗಿದೆ ಎಂದು ಸಿ ಪಿ.ಐ. (ಎಂ) ನ ಕೇಂದ್ರ ಸಮಿತಿ ಹೇಳಿದೆ.

ಕಲ್ಕತ್ತೆಯಲ್ಲಿ ಜನವರಿ 4ರಿಂದ 7ರ ವರೆಗೆ ನಡೆದ ಕೇಂದ್ರ ಸಮಿತಿಯ ಸಭೆಯ ನಂತರ ಹೊರಡಿಸಿದ ಪತ್ರಿಕಾ ಹೇಳಿಕೆಯಲ್ಲಿ ಇದನ್ನು ಗಮನಿಸಲಾಗಿದೆ.

ದೆಹಲಿ ರ್‍ಯಾಲಿಯ ಮೊದಲು ಸಿ.ಪಿ.ಐ.(ಎಂ) ನೇತೃತ್ವದ ಸಾಮೂಹಿಕ ಸಂಘಟನೆಗಳು ನಡೆಸಿದ ರೈತ ಕಾರ್ಮಿಕ ಹಾಗೂ ಕೃಷಿ ಕೂಲಿಗಾರರ ಒಂದು ವಾರದ ಚಳುವಳಿ, ನಂತರ ದೆಹಲಿಯಲ್ಲಿ ನಡೆದ ಯುವ ಜನ ರ್‍ಯಾಲಿ ಇದಾದ ನಂತರ ಎಡ ಪಕ್ಷಗಳ ಮುತುವರ್ಜಿಯಿಂದ ಕೋಮುವಾದದ ವಿರುದ್ಧ ಸಮಾವೇಶ ನಡೆದು ಎಡ ಪಕ್ಷಗಳು ಮತ್ತು ಇತರ ಜಾತ್ಯಾತೀತ ವಿರೋಧ ಪಕ್ಷಗಳು ಜನತೆಯ ತಕ್ಷಣದ ಬೇಡಿಗಳಿಗಾಗಿ, ರಾಷ್ಟ್ರೀಯ ಐಕ್ಯತೆಯ ರಕ್ಷಣೆಗಾಗಿ ರಾಜೀವ್ ಗಾಂಧಿ ಸರ್ಕಾರದ ನಾಮೆಗಾಗಿ ಹೋರಾಟದಲ್ಲಿ ಪರಸ್ಪರ ಸಮೀಪ ಬರುವುದು ಸಾಧ್ಯವಾದಂತಾಗಿದೆ ಎಂದು ಹೇಳಿಕೆ ತಿಳಿಸಿದೆ.

ಹೀಗೆ "ಭಾರತ ಬಂದ್ ಗೆ ರಂಗ ಸಿದ್ದವಾಗಿದೆ. ಇದು ರಾಜೀವ್‌ಗಾಂಧಿ ಸರ್ಕಾರ ರಾಜಿನಾಮೆ ನೀಡಿ ಮರು ಚುನಾವಣೆ ನಡೆಸಬೇಕೆಂಬ ಜನತೆಯ ಆಕಾಂಕ್ಷೆಯ ಒಂದು ಬೃಹತ್ ಅಭಿವ್ಯಕ್ತಿಯಾಗದೆ. ಇದಕ್ಕಾಗಿ ಪಕ್ಷದ ಎಲ್ಲಾ ಘಟಕಗಳು ಹಾಗೂ ಸಾಮೂಹಿಕ ಸಂಘಟನೆಗಳಲ್ಲಿ ದುಡಿಯುವ ಸದಸ್ಯರು ಎಲ್ಲಾ ಜಾತ್ಯಾತೀತ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಸಹಕಾರ ಕ್ರೋಢೀಕರಿಸಲು ಕೋಟಿಗಟ್ಟಲೇ ಹೋರಾಟಶೀಲ ಜನಗಳನ್ನು ತೀವ್ರ ಕಾರ್ಯಾಚರಣೆಗಿಳಿಸಲು ತಮ್ಮ ಸಮಸ್ತ ಚೈತನ್ಯವನ್ನು ಬಳಸಬೇಕೆಂದು ಕೇಂದ್ರ ಸಮಿತಿ ಕರೆ ನೀಡಿದೆ.

ಕಾಂಗ್ರೆಸೇತರ ಸರ್ಕಾರಗಳ ಮೇಲೆ ಹಲ್ಲೆ

ಆಂತರಿಕ ಗುಂಪುಗಾರಿಕೆ ಹಾಗೂ ಹೊರಗಡೆ ಜನತೆಯ ವ್ಯಾಪಕ ಅಸಂತೃಪ್ತಿಯಿಂದ ತಲ್ಲಣಗೊಂಡಿರುವ ಆಳುವ ಕಾಂಗ್ರೆಸ್ ಪಕ್ಷ ವಿರೋಧ ಪಕ್ಷಗಳು, ಮುಖ್ಯತಃ ಎಡ ಪಕ್ಷಗಳು ಐಕ್ಯತೆಯತ್ತ ಸಾಗುತ್ತಿರುವುದನ್ನು ತಡೆಯಲು ಸರ್ವ ಪ್ರಯತ್ನ ನಡೆಸುತ್ತಿದೆ. "ರಾಷ್ಟ್ರ-ವಿರೋಧಿ" ರಾಜ್ಯ ಸರ್ಕಾರಗಳನ್ನು ವಜಾಮಾಡುವ ಪ್ರಧಾನಿಯವರ ಬೆದರಿಕೆ, ಪಶ್ಚಿಮ ಬಂಗಾಳದ ಎಡ ರಂಗ ಸರ್ಕಾರದ ವಿರುದ್ಧ ಹಿಂಸಾಚಾರಕ್ಕೆ ಘನೀಖಾನ್ ಚೌದುರಿ ಕರೆ, ಕಾಂಗ್ರೆಸ್‌ನ ಮಿತ್ರ ಪಕ್ಷ ಟಿ.ಯು.ಜೆ.ಎಸ್. ನೇರ ಬೆಂಬಲ ಪಡೆದಿರುವ ಟಿ.ಎನ್.ವಿ. ಉಗ್ರಗಾಮಿಗಳು ಶಾಂತಿಪ್ರಿಯ ತ್ರಿಪುರಾ ಜನತೆಯ ಮೇಲೆ ನಡೆಸುತ್ತಿರುವ ಹಿಂಸಾಚಾರ, ಕೇರಳದ ಎಲ್.ಡಿ.ಎಫ್. ಸರ್ಕಾರದ ವಿರುದ್ಧ ಹಣಕಾಸಿನ ಪಕ್ಷಪಾತ, ತ್ರಿಪುರಾದಲ್ಲಿ ಮತದಾರರಿಗೆ ಲಂಚ ನೀಡುವ "ಸಾಲ ಮೇಳ" ಇವೆಲ್ಲಾ ಕೇಂದ್ರದ ಕಾಂಗ್ರೆಸ್ ಸರ್ಕಾರ ಎಡ ನೇತೃತ್ವದ ರಾಜ್ಯ

(8 ನೇ ಪುಟ ನೋಡಿ)

ಸೂಚನೆ

ಕಾರಣಾಂತರದಿಂದ ಜನವರಿ 17ರ ಪತ್ರಿಕೆ ಪ್ರಕಟಿಸಲಾಗಲಿಲ್ಲ. ಓದುಗರಲ್ಲಿ ಕ್ಷಮೆ ಕೋರುತ್ತೇವೆ.

ಸಂಪಾದಕ ಮಂಡಳಿ

ಖಾನ್ ಅಬ್ದುಲ್ ಗಫಾರ್‌ಖಾನ್ ನಿಧನ

ಗಡಿನಾಡಗಾಂಧಿ ಎಂದು ತುಂಬಾ ಜನಪ್ರಿಯರಾಗಿದ್ದ ಫಖ್ತೂನ್ ನಾಯಕರಾದಖಾನ ಅಬ್ದುಲ್ ಗಫಾರ್ ಖಾನ್ ಅವರು ಬಹಳ ದಿವಸಗಳ ಅಸ್ವಸ್ಥತೆಯ ನಂತರ ಪೇಶಾವರದಲ್ಲಿ ನಿಧನರಾದರು. ಭಾರತ ದೇಶದ ಸ್ವಾತಂತ್ರ್ಯ ಪೂರ್ವದಲ್ಲಿ ಹಾ.ಗೂ ಸ್ವಾತಂತ್ರ್ಯದ ನಂತರ ಅವರು 30 ವರ್ಷ ಜೈಲು ಶಿಕ್ಷೆ ಅನುಭವಿಸಿದ್ದರು. ಅವರು ಮೃತರಾಗುವಾಗ ಅವರಿಗೆ 98 ವರ್ಷ. ಅವರ ಮರಣಕ್ಕೆ ಸಿ.ಪಿ ಐ.(ಎಂ) ಕರ್ನಾಟಕ ರಾಜ್ಯ ಸಮಿತಿ ಸಂತಾಪ ವ್ಯಕ್ತ ಮಾಡುತ್ತದೆ.

ಜನವರಿ 30 ಪ್ರಮಾಣ ವಚನ ದಿನ

ಜನವರಿ 30 ದೇಶಾದ್ಯಂತ "ಪ್ರಯಾಣ ವಚನ ದಿನ" ವನ್ನಾಗಿ ಆಚರಿಸಬೇಕೆಂದು ಡಿ. 9,1987 ರಂದು ದಿಲ್ಲಿಯ ಬೋಟ್‌ಕ್ಲಬ್‌ನಲ್ಲಿ ನೆರೆದಿದ್ದ ಎಡ ಪಕ್ಷಗಳ ನೇತೃತ್ವದ ಬೃಹತ್ ಮತ ಪ್ರದರ್ಶನದಂದು ನಿರ್ಣಯಿಸಲಾಗಿತ್ತು. ಜನವರಿ 30 ಮಹಾತ್ಮಾಗಾಂಧಿಯವರು ಹುತಾತ್ಮರಾದ ದಿನ. ಆ ದಿವಸ ದೇಶಾದ್ಯಂತ ಸಭೆ ನಡೆಸಿ ರಾಜೀವಗಾಂಧಿಯವರು ರಾಜೀನಾಮೆ ಕೊಡಬೇಕೆಂದೂ, ರಾಷ್ಟ್ರದ ಐಕ್ಯತೆಯ ಮತ್ತು ಜಾತೀಯ ಸೌಹಾರ್ದತೆಯನ್ನು ರಕ್ಷಿಸುತ್ತೇವೆಂದೂ ಪ್ರತಿಜ್ಞೆ ಕೈಗೊಳ್ಳಬೇಕೆಂದೂ ಎಡ ಪಕ್ಷಗಳು ಕರೆ ನೀಡಿವೆ.

ಕರ್ನಾಟಕದಾದ್ಯಂತ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಸಿ. ಪಿ. ಐ. (ಎಂ) ರಾಜ್ಯ ಸಮಿತಿ ಎಲ್ಲಾ ಘಟಕಗಳಿಗೆ ಕರೆ ಕೊಡುತ್ತದೆ. ಅಂದು ಎಲ್ಲಾ ಘಟಕಗಳು ಸಾರ್ವಜನಿಕ ಸಭೆ ಏರ್ಪಡಿಸಿ ಸಭಿಕರಿಂದ ''ರಾಜೀವಗಾಂಧಿ ರಾಜೀನಾಮೆ ಕೊಡಬೇಕು. ದೇಶದ ಐಕ್ಯತೆ-ಜಾತೀಯ ಸೌಹಾರ್ದತೆ ರಕ್ಷಿಸುತ್ತೇವೆ'' ಎಂಬ ಪ್ರತಿಜ್ಞೆ ಘೋಷಿಸಬೇಕು.

ಅದೇ ದಿವಸ ಪಶ್ಚಿಮ ಬಂಗಾಲದಲ್ಲಿಎಡ ಪಕ್ಷಗಳು ರಾಜ್ಯಾದ್ಯಂತ ಮಾನವ ಸರಪಳಿ ನಿರ್ಮಿಸಿ ಘೋಷಣೆ ಕೈಗೊಳ್ಳಲಿವೆ.

ವಿದ್ಯಾರ್ಥಿ ಯುವಜನತೆಯ ಹೋರಾಟ ಮುಂದುವರಿಯಲಿ

ದೇಶದಲ್ಲಿ ಕೋಮುವಾದಿ ಛಿದ್ರಕಾರಿ ಶಕ್ತಿಗಳ ಚಟುವಟಿಕೆ ದೇಶದ ಸಮಗ್ರತೆ ಐಕ್ಯತೆಗೆ ಮಾರಕವಾಗಿದೆ. ದೇಶದ ಸ್ವಾತಂತ್ರ್ಯಕ್ಕಾಗಿ ಧೀರ ಹೋರಾಟ ನಡೆಸಿ ಅಪಾರ ತ್ಯಾಗ ಬಲಿದಾನ ಮಾಡಿದ ಭಾರತದ ವಿದ್ಯಾರ್ಥಿ ಯುವ ಜನತೆಯ ಪರಂಪರೆಯನ್ನು ಮಾದರಿಯಾಗಿಟ್ಟುಕೊಂಡು ಕರ್ನಾಟಕದ, ವಿದ್ಯಾರ್ಥಿ ಹಾಗೂ ಯುವಕರು ಛಿದ್ರಕಾರಿ ಜಾತೀವಾದಿಗಳ ವಿರುದ್ಧ ನೂತನ ಶಿಕ್ಷಣ ನೀತಿಯ ವಿರುದ್ಧ ವಿದ್ಯಾರ್ಥಿಗಳ ಸಮಸ್ಯೆಗಳ ಪರಿಹಾರಕ್ಕಾಗಿಯೇ ಜನಹಿತ ರಕ್ಷಣೆಗಾಗಿಯೂ ಮುಂದಾಗಬೇಕು, ನಿರಂತರ ಐಕ್ಯ ಹೋರಾಟ ನಡೆಸಬೇಕೆಂದು ಪಶ್ಚಿಮ ಬಂಗಾಲದ ಶಿಕ್ಷಣಮಂತ್ರಿಗಳಾದ ಕಾಂತಿಬಿಶ್ವಾಸ್ ಅವರು ಗುಲ್ಬರ್ಗಾದಲ್ಲಿ ಜನವರಿ 16 ರಂದು ಎಸ್.ಎಫ್.ಐ. 5 ನೇ ರಾಜ್ಯ ಸಮ್ಮೇಳನದ ಬೃಹತ್ ರ್‍ಯಾಲಿ ನಂತರ ನಡೆದ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಕರೆ ನೀಡಿದರು.

ಸ್ವಾತಂತ್ರ್ಯ ಪೂರ್ವದಿಂದಲೂ ಎಸ್.ಎಫ್.ಐ ತನ್ನ ಚಾರಿತ್ರಿಕ ಪರಂಪರೆ ಉಳಿಸಿಕೊಂಡಿದೆ. ನೂರಾರು ಸಂಗಾತಿಗಳ ತ್ಯಾಗ ಬಲಿದಾನದಿಂದ ಕಟ್ಟಿ ಬೆಳೆಸಿದ ಸಂಘಟನೆ ವಿದ್ಯಾರ್ಥಿ ಸಮುದಾಯದ ಶೈಕ್ಷಣಿಕ ಉದ್ಯೋಗದ ಬೇಡಿಕೆಗಾಗಿ ಸರ್ಕಾರದ ನೀತಿಯ ಬದಲಿಗಾಗಿ ಸಂಘರ್ಷ ಕೆಳಿಯಬೇಕಾಗಿದೆ ಎಂದು ಎಸ್.ಎಫ್.ಐ. ಅಖಿಲಭಾರತ ಪ್ರಧಾನ ಕಾರ್ಯದರ್ಶಿ ಕಾ.ನಿಲೋತ್ಪಲಬಸು ಹೇಳಿದರು.

ದೇಶದ ಸಂಪತ್ತನ್ನು ಕೆಲವೇ ಜನರು ದೋಚುತ್ತಿದ್ದಾರೆ. ಅವರೇ ಕೇಂದ್ರ ಸರಕಾರದ ಚುಕ್ಕಾಣಿ ಹಿಡಿದಿದ್ದಾರೆ. ದೇಶದಲ್ಲಿ ಬಡತನ ಹೆಚ್ಚಾಗಿದೆ. ಕೇಂದ್ರ-ರಾಜ್ಯ ಸಂಬಂಧ ಹದಗೆಟ್ಟಿದೆ. ಆ ಕಾರಣದಿಂದಲೇ ರಾಜೀವಗಾಂಧಿ ರಾಜೀನಾಮೆ ಕೊಡಬೇಕೆಂದು ಎಡ ಪ್ರಜಾಪ್ರಭುತ್ವ ಶಕ್ತಿಗಳು ಚಳುವಳಿ ನಡೆಸಿವೆಂದು ಹೇಳಿ ಆ ಹೋರಾಟದಲ್ಲಿ ಕರ್ನಾಟಕದ ಜನತೆ ಸಕ್ರಿಯ ಭಾಗವಹಿಸಬೇಕೆಂದು ಕರೆನೀಡಿದರು. ಸಂಸತ್ ಸದಸ್ಯರಾದ ಸೈಫುದ್ದೀನ ಚೌಧರಿ, ಎಸ್.ಎಫ್.ಐ. ಪ್ರಧಾನ ಕಾರ್ಯದರ್ಶಿ ನೀಲೋತ್ಪಲಬಸು, ಶಾಸಕರಾದ ಆರ್.ವೆಂಕಟರಾಮಯ್ಯ, ಕಾರ್ಮಿಕ

(8 ನೇ ಪುಟ ನೋಡಿ)

ಆರ್ಥಿಕ-ಸಮೀಕ್ಷೆ

87-ತೀವ್ರ ಆರ್ಥಿಕ ಹಿನ್ನಡೆ ಸಂಪನ್ಮೂಲಗಳ ಕೊರತೆ, ಸೊನ್ನೆ ಆರ್ಥಿಕ ಅಭಿವೃದ್ಧಿ!

ಆರ್. ಚಂದ್ರ

ಭಾರತದ ಆರ್ಥಿಕ ಪರಿಸ್ಥಿತಿಯು 1987ನೇ ವರ್ಷದಲ್ಲಿ ಹಿಂದೆಂದೂ ಕಾಣದಷ್ಟು ತೀವ್ರ ಆರ್ಥಿಕ ದುಃಸ್ಥಿತಿಯನ್ನು ಹಿನ್ನಡೆಯನ್ನೂ ಅನುಭವಿಸಿದೆ. ಏಳನೇ ಯೋಜನೆಯ (1985–90) ಕುರಿತು ಸರಕಾರ, ರಿಸರ್ವ್ ಬ್ಯಾಂಕ್, ಜಾಗತಿಕ ಬ್ಯಾಂಕ್, ಹಾಗೂ ಅನೇಕ ಆರ್ಥಿಕ ತಜ್ಞರು ನಡೆಸಿದ ನಡುಗಾಲ ಸಮೀಕ್ಷೆಗಳ ಆಧಾರದಲ್ಲಿ ಭಾರತದ ಆರ್ಥಿಕ ವ್ಯವಸ್ಥೆಯು ಸಂಪನ್ಮೂಲಗಳ ಕೊರತೆ, ಹಣದುಬ್ಬರ, ಸಾಲದಹೊರೆ, ರೂಪಾಯಿಯ ಅಪಮೌಲ್ಯ, ವಿದೇಶಿವಿನಿಮಯ ಶೇವಣೆಯಲ್ಲಿ ಇಳಿಮುಖ, ಸೊನ್ನೆ ಆರ್ಥಿಕ ಅಭಿವೃದ್ಧಿಯಂತಹ ತೀವ್ರ ದುಃಸ್ಥಿತಿಗಳಿಗೊಳಗಾಗಿದೆ ಎಂದು ತಿಳಿದುಬಂದಿದೆ.

ಸಂಪನ್ಮೂಲಗಳ ಕೊರತೆ

ಏಳನೇಯ ಯೋಜನೆಯಲ್ಲಿ ಸಾರ್ವಜನಿಕ ಕ್ಷೇತ್ರದ ಅಭಿವೃದ್ಧಿಗಾಗಿ 1984-85ರ ಬೆಲೆ ಮಟ್ಟದಲ್ಲಿ (ಗ್ರಾಹಕರ ಬೆಲೆ ಸೂಚಿ 1960:100·600) ರೂ. 1,80,000, ಕೋಟಿ ವೆಚ್ಚ ಮಾಡುವುದಾಗಿ ನಿರ್ಧರಿಸಲಾಗಿತ್ತು. ಆದರೆ ಈ ಅಂದಾಜು ಮುಂದಿನ 5 ವರ್ಷಗಳಲ್ಲಿನ ಬೆಲೆ ಏರಿಕೆಯನ್ನು ಗಣನೇಗೆ ತೆಗೆದುಕೊಳ್ಳಲಿಲ್ಲ! 1987-88ರ ಬೆಲೆ ಮಟ್ಟದಲ್ಲಿ (ಗ್ರಾಹಕರ ಬೆಲೆ ಸೂಚಿ ಅಕ್ಟೋಬರ್ 87:750) ಒಟ್ಟು ಯೋಜನೆಯ ವೆಚ್ಚವು ರೂ 2,36,000ಕೋಟಿಯಷ್ಟಾಗಬೇಕು. ಆದರೆ, ಮೊದಲ ಮೂರುವರ್ಷಗಳಲ್ಲಿ 1985-86, 1986-87, 1987-88ರಲ್ಲಿ ಯೋಜನೆಯ ವೆಚ್ಚ ಕೇವಲ ರೂ.118,000ಕೋಟಿ ಅಂದರೆ, ಶೇ 50 ರಷ್ಟು ಮಾತ್ರವಾಗಬಹುದು ಎಂದು ಅಂದಾಜು ಮಾಡಲಾಗಿದೆ. ಮುಂದಿನ ಎರಡು ವರ್ಷಗಳಲ್ಲಿ ಇಷ್ಟೇ ಪ್ರಮಾಣದಲ್ಲಿ, ಇನ್ನೂ ಬೆಲೆಏರಿಕೆಯನ್ನು ಗಣನೇಗೆ ತೆಗೆದುಕೊಂಡರೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಯೋಜನೆಗೆ ವೆಚ್ಚ ಮಾಡಬೇಕಾಗುವುದು. ಆದಕ್ಕೆ ತೀವ್ರ ಸಂಪನ್ಮೂಲ ಕೊರತೆ ಬಂದೊದಗಿದೆ. ಕಾರಣ:

ಕಳೆದ ಮೂರು ವರ್ಷಗಳಲ್ಲಿ, ಮುಖ್ಯವಾಗಿ 1987–88 ರಲ್ಲಿ ಯೋಜನಾ ವೆಚ್ಚದ ಶೇ.80 ರಷ್ಟು ಸಂಪನ್ಮೂಲವನ್ನು 1. ಸಾರ್ವಜನಿಕಸಾಲ 2. ವಿದೇಶಿಸಾಲ ನೆರವು ಮತ್ತು 3. ಕೊರತೆ ಹಣಸೃಷ್ಟಿ ಮೂಲಕ ಸಂಗ್ರಹಿಸಲಾಗಿದೆ, ಉಳಿದ ಶೇ20ರಷ್ಟು ಸಂಪನ್ಮೂಲವನ್ನು ಹೆಚ್ಚಾಗಿ 1. ಸಾರ್ವಜನಿಕ ಕ್ಷೇತ್ರದ ಉತ್ಪಾದನೆಗಳ ಹಾಗೂ ಸೇವಾಸೌಲಭ್ಯಗಳ ಬೆಲೆಏರಿಸುವ ಮೂಲಕ ಮತ್ತು 2. ಜನಸಾಮಾನ್ಯರ ಜೀವನಾವ್ಯಶಕ ವಸ್ತುಗಳ ಮೇಲೆ ಹೆಚ್ಚುವರಿ ಅಪ್ರತ್ಯಕ್ಷ ತೆರಿಗೆ ಹೇರುವ ಮೂಲಕ ಸಂಗ್ರಹಿಸಲಾಗುತ್ತಿದೆ. ಯೋಜನೆಯ ವೆಚ್ಚಕ್ಕೆ ಸಂಪನ್ಮೂಲ ಪಡೆಯುವ ಈ ಐದು ವಿಧಾನಗಳೂ ತಮ್ಮ ಗರಿಷ್ಠ ಮಟ್ಟಕ್ಕೆ ಈಗಾಗಲೇ ಮುಟ್ಟಿವೆ. ಅಲ್ಲದೆ ಈ ವಿಧಾನಗಳಿಂದಾಗಿ ನಾಗಾಲೋಟದಲ್ಲಿ ಬೆಲೆಏರಿಕೆ ಹಾಗೂ ಹಣದುಬ್ಬರ ಹೆಚ್ಚುತ್ತಿದ್ದು ಯೋಜನೆಯು ತನ್ನ ಗುರಿ ಸಾಧಿಸಲು ಸಂಪೂರ್ಣ ಸೋತಿದೆ. ಸಂಪನ್ಮೂಲ ಸಂಗ್ರಹದಲ್ಲಿ ಶ್ರೀಮಂತರ ಅಪಾರ, ಆಸ್ತಿ, ವೆಚ್ಚಗಳ ಮೇಲಿನ ಹಾಗೂ ವ್ಯಾಪಾರ ಕೈಗಾರಿಕೋದ್ಯಮಗಳ ಬೃಹತ್ ಸಂಸ್ಥೆಗಳ ಲಾಭಗಳಿಕೆಯ ಮೇಲಿನ ಪ್ರತ್ಯಕ್ಷ ತೆರಿಗೆಗಳ ಪಾಲು ಬಹಳ ಗೌಣವಾಗಿದೆ. ಯೋಜನೆಯ ವೆಚ್ಚದ ಹೆಚ್ಚಿನ ಭಾರವು ಜನಸಾಮಾನ್ಯರ ಮೇಲೆಯೇ ಬೀಳುತ್ತಿದೆ. ಆದರೆ ಅದರ ಪ್ರತಿಫಲದ ಸಿಂಹಪಾಲು ಲಾಭಗಳಿಕೆ ಹಾಗೂ ಆಸ್ತಿ–ಸಂಪತ್ತು ಹೆಚ್ಚಳ ಶ್ರೀಮಂತ ವರ್ಗಕ್ಕೆ, ಆಸ್ತಿವಂತರಿಗೆ, ದೊಡ್ಡ ಬಂಡವಾಳಶಾಹಿಗಳಿಗೆ ದೊಡ್ಡ ಭೂಮಾಲಕರಿಗೆ ಹೆಚ್ಚಾಗಿ ಸೇರುತ್ತಿದೆ. ಇದುವೇ ಬಂಡವಾಳಶಾಹಿ ಆರ್ಥಿಕ ಅಭಿವೃದ್ಧಿ ಮಾರ್ಗದ ವಿಪರ್ಯಾಸ !

ಸಾಲದ ಬಲೆಯಲ್ಲಿ

ಯೋಜನೆಯು ಪೂರ್ಣಾವಧಿಯಲ್ಲಿ ಆಂತರಿಕ ಸಾರ್ವಜನಿಕ ಸಾಲಗಳ ಮೂಲಕ ರೂ.30,562 ಕೋಟಿ ಸಂಪನ್ಮೂಲ ಸಂಗ್ರಹಿಸುವುದಾಗಿ ಉದ್ದೇಶಿಸಲಾಗಿತ್ತು. ಆದರೆ ಮೊದಲ ಮೂರೇ ವರ್ಷಗಳಲ್ಲಿ ರೂ.23,000 ಕೋಟಿ ಈ ವಿಧಾನದಲ್ಲಿ ಸಂಗ್ರಹಿಸಲಾಗಿದೆ. ಆಂತರಿಕ ಸಾಲದ ಮೊತ್ತ 1979–80ರಲ್ಲಿ ರೂ. 17·787 ಕೋಟಿಯಷ್ಟೇ ಆಗಿತ್ತು. 1986-87ರಲ್ಲಿ ಅದು ರೂ. 60.328 ಕೋಟಿಗೆ ಮುಟ್ಟಿತ್ತು. 1987–88ರಲ್ಲಿ ಆಂತರಿಕ ಸಾಲ ರೂ. 1,00,000 ಕೋಟಿಗೂ ಮೀರುವ ಸಂಭವವಿದೆ. ಪರಿಣಾಮವಾಗಿ, ಇನ್ನು ಮುಂದೆ ಸರಕಾರದ ವಾರ್ಷಿಕ ಸಂಪನ್ಮೂಲದಸಿಂಹಪಾಲು–ರೂ.10,000 ಕೋಟಿಗೂ ಹೆಚ್ಚು ಸಾಲ ಮರುಪಾವತಿ ಹಾಗೂ ಬಡ್ಡಿ ಪಾವತಿಗೇ ಖರ್ಚಾಗುವುದು ಆರ್ಥಿಕ ಅಭಿವೃದ್ಧಿಗೆ ಸಾಕಷ್ಟು ಸಂಪನ್ಮೂಲ ಸಿಗಲಾರದು ಆಂತರಿಕ ಸಾಲದ ಬಲೆಗೆಬೀಳ ಬೇಕಾದೀತು.

ಹಾಗೆಯೇ 1985ರ ಅಂತ್ಯದಲ್ಲಿ ವಿದೇಶಿ ಸಾಲದಮೊತ್ತವುರೂ.24,000 ಕೋಟಿಯಷ್ಟಾಗಿತ್ತು; ಮಾರ್ಚ್ 1987 ರಷ್ಟರಲ್ಲಿ ಇದು ರೂ.33,000 ಕೋಟಿಗೇರಿತು. ವಿದೇಶಿ ಸಾಲ ಮರುಪಾವತಿ ಹಾಗೂ ಬಡ್ಡಿ ಪಾವತಿಯ ಭಾರ ಈಗಾಗಲೇ ವರ್ಷಕ್ಕೆ ರೂ. 4000 ಕೋಟಿಗೂ ಮೀರಿದ್ದು, ನಮ್ಮ ರಫ್ತುಗಳಿಕೆಯ ಶೇ. 24ರಷ್ಟು ವಿದೇಶೀ ಋಣ ಭಾರ ತೀರಿಸಲಿಕ್ಕೆ ವಿನಿಯೋಗವಾಗುತ್ತಿದೆ. ಸದ್ಯದಲ್ಲಿಯೇ ವಾರ್ಷಿಕ ವಿದೇಶಿ ನೆರವು ಮತ್ತು ಸಾಲಗಳಿಕೆಯು ವಿದೇಶಿ ಸಾಲ ಮರುಪಾವತಿ ಹಾಗೂ ಬಡ್ಡಿ ಮರುಪಾವತಿಗೇ ಸಾಕಾಗಲಾರದು ಎಂದು ಭಯ ಪಡಲಾಗಿದೆ. ಈಗಾಗಲೇ ಏಷ್ಯಾ, ಆಫ್ರಿಕಾ, ಲ್ಯಾ, ಅಮೇರಿಕಾದ ಅನೇಕ ಬಡ ರಾಷ್ಟ್ರಗಳು ವಿದೇಶಿ ಸಾಲದ ಬಲೆಯಲ್ಲಿ ಬಿದ್ದು ತೀವ್ರ ಆರ್ಥಿಕ ದುಃಸ್ಥಿತಿಯನ್ನು ಅನುಭವಿಸುತ್ತಿವೆ. ಭಾರತವೂ ಅಂತಹ ಸಾಲದ ಬಲೆಗೆ ಬಿದ್ದು ಪೂರ್ಣ ಆರ್ಥಿಕ ಸ್ವಾತಂತ್ರ್ಯ ಸ್ವಾವಲಂಬನೆ ಕಳೆದುಕೊಳ್ಳುವ ಅಪಾಯದ ಅಂಚಿನಲ್ಲಿದೆ.

ಸಾರ್ವಜನಿಕ ಕ್ಷೇತ್ರದಿಂದ

ಯೋಜನೆಯ ಅವಧಿಯಲ್ಲಿ ಕೇಂದ್ರ ಹಾಗೂ ರಾಜ್ಯಗಳ ಸಾರ್ವಜನಿಕ ಕ್ಷೇತ್ರದ ಸಂಸ್ಥೆಗಳ ಆಂತರಿಕ ಮೂಲದಿಂದ ರೂ.49,725 ಕೋಟಿ ಸಂಪನ್ಮೂಲ ಪಡೆಯುವುದೆಂದು ನಿರ್ಧರಿಸಲಾಗಿತ್ತು. ಕಳೆದ ಮೂರು ವರ್ಷಗಳಲ್ಲಿ ಈ ಮೂಲದಿಂದ ರೂ. 20,735ಕೋಟಿ, ಅಂದರೆ ನಿರೀಕ್ಷಿಸಿದ ಮೊತ್ತದ ಶೇ 40ರಷ್ಟು ಸಂಗ್ರಹಿಸಲು ಸಾಧ್ಯವಾಗಿದೆ. ಈ ವಿಧಾನವೂ ಹಣದುಬ್ಬರಕ್ಕೆ ಕಾರಣವಾಗುವಂತಿದೆ. ರಾಜ್ಯ ಸರಕಾರಗಳು ವರ್ಷವರ್ಷಕ್ಕೂ ವಿದ್ಯುತ್, ರಸ್ತೆಸಾರಿಗೆ ಮುಂತಾದ ಅವಶ್ಯಕ ಸೇವೆಗಳ ದರಗಳನ್ನು ಹೆಚ್ಚಿಸುತ್ತಾ ಬಂದಿವೆ. ಹಾಗೆಯೇ ಕೇಂದ್ರ ಸರಕಾರವು ಪ್ರತಿ ವರ್ಷ ಮುಂಗಡ ಪತ್ರ ಸಂಸತ್ತಿನಲ್ಲಿ ಪ್ರಕಟಿಸುವ ಮೊದಲೇ ಕಲ್ಲಿದ್ದಲು,ಉಕ್ಕು, ಪೆಟ್ರೋಲಿಯಂ; ರೈಲ್ವೆಸಾರಿಗೆ, ಅಂಚೆ–ತಂತಿ ದೂರವಾಣಿ ಮುಂತಾದ ಅವಶ್ಯಕ ವಸ್ತುಗಳ ಹಾಗೂ ಸೇವಾಸೌಲಭ್ಯಗಳ ಬೆಲೆಗಳನ್ನು ಆಡಳಿತ ನಿರ್ದೇಶನಗಳ ಮೂಲಕ ಹೆಚ್ಚಿಸುತ್ತಾ ಬಂದಿದೆ. ಈ ವರ್ಷವೂ ಇತ್ತೀಚಿಗೆ ಸಂಪನ್ಮೂಲಗಳ ಕೊರತೆಯನ್ನು ನೀಗಿಸುವನೆವದಿಂದ ಉಕ್ಕು, ಕಲ್ಲಿದ್ದಲು ಪೆಟ್ರೋಲಿಯಂ, ಲೆವಿಸಕ್ಕರೆ, ಅಡಿಗೆತೈಲ, ಮುಂತಾದವುಗಳ ಬೆಲೆಗಳನ್ನು ವಿಪರೀತ ಹೆಚ್ಚಿಸಿದೆ. ಈ ಸಾಲಿನ ಬೆಲೆ ಹೆಚ್ಚಳದಲ್ಲಿ ಅಡಿಗೆತೈಲದ ಬೆಲೆ ಏರಿಕೆಯಿಂದಲೇ ಕೇಂದ್ರ ಸರಕಾರ ವರ್ಷಕ್ಕೆ ರೂ.1000ಕೋಟಿ ವರ್ಷಕ್ಕೆ ಹೆಚ್ಚುವರಿ ಸಂಪನ್ಮೂಲ ಪಡೆಯಲಿದೆ. ಕೆಲವೇ ದಿನಗಳ ಹಿಂದೆ ಪೆಟ್ರೋಲಿಯಂ ದರ ಏರಿಕೆಯು1972ರ ನಂತರ ಅತ್ಯಂತ ಗರಿಷ್ಠ ಪ್ರಮಾಣದ್ದಾಗಿದ್ದು ವರ್ಷಕ್ಕೆ ರೂ. 400 ಕೋಟಿ ಕೇಂದ್ರದ ಬೊಕ್ಕಸಕ್ಕೆ ಬರುವಂತಾಗಿದೆ.

ತೆರಿಗೆಯ ಭಾರ

ಯೋಜನೆಯ ಮೊದಲ ಮೂರು ವರ್ಷಗಳಲ್ಲಿ ರೂ.8250ಕೋಟಿ ತೆರಿಗೆ ಸಂಗ್ರಹಿಸಬೇಕಾಗಿತ್ತಾದರೂ, ಈ ಅವಧಿಯಲ್ಲಿ ರೂ. 10,236 ಕೋಟಿಯಷ್ಟು ತೆರಿಗೆ ಸಂಗ್ರಹಿಸಲಾಗಿದೆ. ಇದರಲ್ಲಿ ಶೇ. 85 ರಷ್ಟು ಜನಸಾಮಾನ್ಯರ ಜೀವನಾವಶ್ಯಕವಸ್ತುಗಳ ಮೇಲಿನ ಅಪ್ರತ್ಯಕ್ಷ ತೆರಿಗೆಗಳ ಮೂಲಕ ಪಡೆದುದಾಗಿದೆ. 1987–88ರ ನಡುಗಾಲದಲ್ಲಿ ಬರಗಾಲ–ನೆರೆ ಪರಿಹಾರದ ನೆವದಿಂದ ರೂ. 650 ಕೋಟಿಯಷ್ಟು ಹೊಸತೆರಿಗೆಗಳನ್ನು ವಿಧಿಸಲಾಗಿದೆ· ಜನ ಕೋಟಿಯು ತೆರಿಗೆ ಭಾರದಿಂದ ತತ್ತರಿಸುತ್ತಿದೆ.

ಕೊರತೆ ಹಣ ಸೃಷ್ಟಿ

ಯೋಜನೆಯ ಪೂರ್ಣಾವಧಿಯಲ್ಲಿ ಸಂಪನ್ಮೂಲಗಳ ಕೊರತೆ ರೂ. 14,000 ಕೋಟಿ ಎಂದು ಅಂದಾಜು ಮಾಡಲಾಗಿದ್ದರೂ, ಮೊದಲ ಮೂರು ವರ್ಷಗಳಲ್ಲಿ ಈ ಕೊರತೆ ರೂ. 18,800 ಕೋಟಿಗೂ ಮೀರಿದೆ! ರಾಜ್ಯ ಸರಕಾರಗಳು ತಮ್ಮ ಸಂಪನ್ಮೂಲ ಸಂಗ್ರಹದ ನಿರೀಕ್ಷೆಯಲ್ಲಿ ರಿಸರ್ವ್ ಬ್ಯಾಂಕಿನಿಂದ ಏಳು ದಿನಗಳಿಗಿಂತ ಹೆಚ್ಚು ಕಾಲಾವಧಿಗೆ ಓವರ್ ಡ್ರಾಫ್ಟ್ (ಮುಂಗಡವಾಗಿ ಹಣ ಪಡೆಯುವುದು) ಮಾಡಲಿಕ್ಕೆ ಕೇಂದ್ರ ಸರ್ಕಾರ ತಡೆಹಾಕುತ್ತಿದೆ. ಇತ್ತೀಚಿಗೆ, ಕೇರಳದ ಎಡರಂಗ ಸರ್ಕಾರಕ್ಕೆ ಅಗತ್ಯ ಬೇಕಾದ ಓವರ್ ಡ್ರಾಫ್ಟ್ ಸೌಕರ್ಯ ಕೇಂದ್ರ ಸರ್ಕಾರದ ನಿರ್ದೇಶನದ ಮೇರೆಗೆ ರಿಸರ್ವ ಬ್ಯಾಂಕ್ ನಿರಾಕರಿಸಿದುದರ ವಿರುದ್ಧ ದೇಶಾದ್ಯಂತ ಪ್ರತಿಭಟಿಸಿದುದನ್ನು ಇಲ್ಲಿ ನೆನಪಿಸಬಹುದು.ಆದರೆ ಸ್ವಾತಂತ್ರ್ಯ ನಂತರದ 40ವರ್ಷಗಳಲ್ಲಿಯೂ ಎಡೆ ಬಿಡದೆ ಕೇಂದ್ರ ಸರ್ಕಾರ ಮಾತ್ರ ತನ್ನ ಸಂಪನ್ಮೂಲ ಕೊರತೆಯನ್ನು ನೀಗಿಸಲು ಯಾವ ಅಡೆ ತಡೆಗಳಿಲ್ಲದೆ ನೋಟು ಅಚ್ಚು ಹಾಕಿಸಿ ಚಲಾವಣೆಗೆ ಬಿಡುತ್ತದೆ. ಇದರಿಂದಾಗಿ ಭಾರೀ ಹಣದುಬ್ಬರ ಉಂಟಾಗುತ್ತಿದೆ. ಜನರ ಗ್ರಾಹಕ ಶಕ್ತಿ, ಜೀವನ ಮಟ್ಟ ಕುಸಿಯುತ್ತಿದೆ.

1987-88ರ ಮುಂಗಡ ಪತ್ರದಲ್ಲಿ ಪ್ರಧಾನಿ ರಾಜೀವ್ ಗಾಂಧಿ ಆರ್ಥಿಕ ಮಂತ್ರಿ ಯಾಗಿದ್ದು ರೂ· 5688 ಕೋಟಿ ಕೊರತೆ ತೋರಿಸಿದ್ದರು. ಆದರೆ ನಡುಗಾಲದ ಸಮೀಕ್ಷೆಯಂತೆ, ಈ ಕೊರತೆಯು ವರ್ಷಾಂತ್ಯದಲ್ಲಿ ರೂ. 10.000 ಕೋಟಿಗೂ ಮೀರುವುದೆಂದು ಅಂದಾಜು ಮಾಡಲಾಗಿತ್ತು. ವರ್ಷದ ಕೊರತೆಯನ್ನು ಹೇಗಾದರೂ ಮೂಲ ಮೊತ್ತಕ್ಕೆ ಸೀಮಿತವಾಗಿಡಲು ಮೊದಲೇ ತಿಳಿಸಿದಂತೆ ಹೊಸ ತೆರಿಗೆಗಳನ್ನು, ಉಕ್ಕು, ಕಲ್ಲಿದ್ದಲು, ಪೆಟ್ರೋಲಿಯಂ, ಸಕ್ಕರೆ, ಅಡಿಗೆತೈಲ ಮುಂತಾದ ಆವಶ್ಯಕ ವಸ್ತುಗಳ ಬೆಲೆ ಏರಿಕೆಯ ಕ್ರಮಗಳನ್ನು ಕೈಗೊಳ್ಳಲಾಯಿತು. ವಾಣಿಜ್ಯ ಬ್ಯಾಂಕುಗಳು ರಿಸರ್ವ್ ಬ್ಯಾಂಕಿನಲ್ಲಿ ಶಾಸನಾನ್ವಯ ಇರಿಸಬೇಕಾದ ಠೇವಣಿಯ ದರವನ್ನು ಏರಿಸಲಾಯಿತು. ಆಗ ಬ್ಯಾಂಕು ಖಾತೆಗಳಿಂದ ಕೇಂದ್ರ ಸರ್ಕಾರದ ಖಾತೆಗೆ ಹಣ ವರ್ಗಾಯಿಸಿದಂತಾಯಿತು. ಈ ಎಲ್ಲಾ ಶರತ್ತುಗಳಿಂದ ಸಂಪನ್ಮೂಲಗಳ ಕೊರತೆಯನ್ನಾಗಲೀ, ಹಣದುಬ್ಬರವನ್ನಾಗಲೀ, ಹೋಗಲಾಡಿಸಲು ಅಸಾಧ್ಯ ಎಂಬುದು ಪ್ರತ್ಯಕ್ಷ ಅನುಭವವೇ ಹೇಳುವುದು.

ಬೆಲೆ ಏರಿಕೆ, ಹಣ ದುಬ್ಬರ

ಈ ಮೊದಲು ತಿಳಿಸಿದಂತೆ, ಯೋಜನೆಯ ವೆಚ್ಚಕ್ಕೆ ಹೆಚ್ಚಾಗಿ ಆಂತರಿಕ ಹಾಗೂ ವಿದೇಶಿ ಸಾಲ, ಕೊರತೆ, ಹಣ ಸೃಷ್ಟಿ ಸಾರ್ವಜನಿಕ ಕ್ಷೇತ್ರದ ಉತ್ಪಾದನೆಗಳ ಬೆಲೆ ಏರಿಕೆ, ಅಪ್ರತ್ಯಕ್ಷ ತೆರಿಗೆ, ಇತ್ಯಾದಿ ವಿಧಾನಗಳನ್ನು ಸತತವಾಗಿ ಅನುಸರಿಸುತ್ತಿರುವುದರಿಂದ ಆರ್ಥಿಕ ವ್ಯವಸ್ಥೆಯಲ್ಲಿ ಭಾರೀ ಪ್ರಮಾಣದ ಹಣ ದುಬ್ಬರ ಉಂಟಾಗುತ್ತಿದೆ. ಜನ ಸಾಮಾನ್ಯರ ಶ್ರಮಿಕ ವರ್ಗದ ಗ್ರಾಹಕ ಶಕ್ತಿ ಹಾಗೂ ಜೀವನ ಮಟ್ಟ ಕುಸಿಯುತ್ತಿದೆ. ಕೃಷಿ–ಕೈಗಾರಿಕಾ ಉತ್ಪಾದನೆಗಳಿಗೆ ಬೇಡಿಕೆ ಇಳಿಮುಖವಾಗುತ್ತಿದೆ. ನೆರೆ ಬರಗಾಲ ಪರಿಸ್ಥಿತಿಯು ಇನ್ನೊಂದೆಡೆಗೆ ಕೊರತೆ ಪರಿಸ್ಥಿತಿ ಉಂಟಾಗಿ ಇನ್ನಷ್ಟು ಬೆಲೆ ಏರಿಕೆ, ಹಣದುಬ್ಬರ ಹೆಚ್ಚುತ್ತಿದೆ. ರಾಜೀವ್ ಸರಕಾರ ಬೆಲೆ ಏರಿಕೆ, ಹಣ ದುಬ್ಬರ ನಿಯಂತ್ರಿಸಲು ಸಂಪೂರ್ಣ ವಿಫಲವಾಗಿದೆ.

ಕೈಗಾರಿಕಾ ಕಾರ್ಮಿಕರ ಗ್ರಾಹಕರ ಬೆಲೆ ಸೂಚಿ(1960–100)ಏಪ್ರಿಲ್–ಸೆಪ್ಟಂಬರ್ 87 ರ ಆರು ತಿಂಗಳ ಅವಧಿಯಲ್ಲಿ 686 ರಿಂದ 745 ಕ್ಕೇರಿತು; ಅಂದರೆ, 59 ಅಂಶಗಳಷ್ಟು, ಶೇ 8.6 ರಷ್ಟು ಏರಿತು, ಹಿಂದಿನ ವರ್ಷ ಇದೇ ಅವಧಿಯಲ್ಲಿ ಈ ಬೆಲೆ ಸೂಚಿಯು ಶೇ. 6 0 ರಷ್ಟು ಏರಿದ್ದು. ಈ ವರ್ಷದ ಬೆಲೆ ಏರಿಕೆಯು ಕಳೆದ ವರ್ಷಕ್ಕಿಂತ ಒಂದುವರೆ ಪಾಲು ಹೆಚ್ಚಾಗಿದೆ ! ಬೆಲೆ ಸೂಚಿ ಅಧ್ಯಯನಕ್ಕೊಳಗಾದ ದೇಶದ 50 ಪ್ರಮುಖ ಕೇಂದ್ರಗಳಲ್ಲಿ, 38 ಕೇಂದ್ರಗಳಲ್ಲಿನ ಬೆಲೆ ಏರಿಕೆಯು ಕಳೆದ ವರ್ಷದ ದರಕ್ಕಿಂತಲೂ ಹೆಚ್ಚಾಗಿದ್ದು, ಅವುಗಳಲ್ಲಿ 17 ಕೇಂದ್ರಗಳಲ್ಲಿ ಶೇ.10 ರಿಂದ ಶೇ. 17.5ರಷ್ಟು, ಎರಡು ಅಂಕೆಯ ಹಣ ದುಬ್ಬರ ದಾಖಲೆಯಾಗಿದೆ· ಕಲ್ಕತ್ತ ನಗರದಲ್ಲಿ ಮಾತ್ರ ಕಳೆದ ವರ್ಷದ ಹಣದುಬ್ಬರದ ದರಕ್ಕಿಂತ (ಶೇ. 9.3) ಈ ವರ್ಷದ ದರವು (ಶೇ. 8.5) ಇಳಿಮುಖವಾಗಿದೆ. ನವಂಬರ್ 1987 ರಲ್ಲಿ ಗ್ರಾಹಕರ ಬೆಲೆ ಸೂಚಿಯು 755 ಕ್ಕೇರಿದ್ದು, ಡಿಸೆಂಬರ್ 87ರಲ್ಲಿ 760 ಕ್ಕೂ ಮೀರಿರಬಹುದು. ಜೊತೆಗೇ, ನಗದು ಮಾರುಕಟ್ಟೆಯ ಬೆಲೆ ಸೂಚಿ (1970–71 : 100) ಏಪ್ರಿಲ್ 87 ರಲ್ಲಿ 379 ಆಗಿದ್ದು, ಡಿಸೆಂಬರ್ 87 ರಷ್ಟರಲ್ಲಿ 410 ಕ್ಕೇರಿತು. ಒಟ್ಟನಲ್ಲಿ ರೂಪಾಯಿಯ ಬೆಲೆ 12 ಪೈಸೆಗಿಳಿದಿದೆ !

ವಿಪರೀತ ಬೆಲೆ ಏರಿಕೆ, ಹಣ ದುಬ್ಬರದಿಂದಾಗಿ ಜೀವನಾವಶ್ಯಕ ವಸ್ತುಗಳಾದ ಆಹಾರ ಧಾನ್ಯಗಳು, ಬೇಳೆಕಾಳುಗಳು, ತರಕಾರಿ, ಸೀಮೆಎಣ್ಣೆ, ಉಪ್ಪು, ಬೆಲ್ಲ, ಸಕ್ಕರೆ, ಕಡ್ಡಿ ಪೆಟ್ಟಿಗೆ, ಇತ್ಯಾದಿಗಳು ಜನ ಸಾಮಾನ್ಯರ ಕೈಗೆಟುಕದಂತಾಗಿದೆ. ಜನರ ಜೀವನ ಪರಿಸ್ಥಿತಿ ತೀರಾ ಹದಗೆಡುತ್ತಿದೆ.

ಸೊನ್ನೆ ಆರ್ಥಿಕ ಅಭಿವೃದ್ಧಿ

ಯೋಜನೆಯ ಮೂರು ವರ್ಷಗಳಲ್ಲಿ ರೂ 11,8,000 ಕೋಟಿ ವೆಚ್ಚ ಮಾಡಿದ್ದರೂ. ಖಾಸಗಿ ಕ್ಷೇತ್ರದ ಕೃಷಿ ಕೈಗಾರಿಕೆಗಳಲ್ಲೂ ಸಾವಿರಾರು ಕೋಟಿ ವೆಚ್ಚ ಮಾಡಿದ್ದರೂ ನಿರೀಕ್ಷಿತ ವಾರ್ಷಿಕ ಶೇ.5ರಷ್ಟು ಆರ್ಥಿಕ ಪ್ರಗತಿ ಸಾಧಿಸಲಿಕ್ಕಾಗಲಿಲ್ಲ. ತೀವ್ರ ಬರಗಾಲದಿಂದಾಗಿ ಆಹಾರ ಧಾನ್ಯಗಳ ಉತ್ಪಾದನೆ 10–15 ಮಿ ಟನ್‌ಗಳಷ್ಟು ಕಡಿಮೆಯಾಗಬಹುದೆಂದು ನಿರೀಕ್ಷಿಸಲಾಗಿದೆ. ಕೈಗಾರಿಕಾ ಉತ್ಪಾದನೆಯು ಉಕ್ಕು, ವಿದ್ಯುತ್, ಕಲ್ಲಿದ್ದಲು, ಸಿಮೆಂಟ್, ಇತ್ಯಾದಿ ಪ್ರಮುಖ ಕ್ಷೇತ್ರಗಳಲ್ಲಿ ನಿರೀ

(5ನೇ ಪುಟ ನೋಡಿ)

ಯಶಸ್ವಿಗೊಂಡ ಎಸ್. ಎಫ್. ಐ. 5ನೇ ರಾಜ್ಯ ಸಮ್ಮೇಳನ

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ನ 5ನೇ ಕರ್ನಾಟಕ ರಾಜ್ಯ ಸಮ್ಮೇಳನವು ಗುಲ್ಬರ್ಗಾದಲ್ಲಿ 1988 ಜನವರಿ-16ರಿಂದ 18 ರವರೆಗೆ ಅತ್ಯಂತ ಯಶಸ್ವಿಯಾಗಿ ನೆರವೇರಿತು.

ಸಮ್ಮೇಳನದ ಕಲಾಪಗಳ ಆರಂಭದ ಭಾಗವಾಗಿ 16 ರಂದು ನಗರದಲ್ಲಿ ವರ್ಣರಂಜಿತ ರ್‍ಯಾಲಿ ಮತ್ತು ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು. ದಿ.17.1.88 ರಂದು ಮುಂಜಾನೆ 10 ಗಂಟೆಗೆ ರಾಜ್ಯ ಸಮಿತಿ ಅಧ್ಯಕ್ಷರಾಗಿದ್ದ ಕಾಂ. ಆರ್. ಜಯಕುಮಾರ್ ಅವರು ಧ್ವಜಾರೋಹಣವನ್ನು ನೆರವೇರಿಸುವುದರೊಂದಿಗೆ ಸಮ್ಮೇಳನದ ಪ್ರತಿನಿಧಿ ಅಧಿವೇಶನದ ಕಲಾಪಗಳು ಆರಂಭಗೊಂಡವು. ಆರಂಭದಲ್ಲಿ ರಾಜ್ಯ ಕಾರ್ಯದರ್ಶಿ ಕಾಂ. ಎಸ್.ಆರ್. ಆರಾಧ್ಯರವರು ಸರ್ವರನ್ನೂ ಸ್ವಾಗತಿಸಿ ಧ್ವಜಾರೋಹಣ ವಾಗುತ್ತಿದ್ದಂತೆ ಘೋಷಣೆಗಳನ್ನು ಸಂಗಾತಿಗಳೂ ಕೂಗಿದರು. ನಂತರ ಎಸ್.ಎಫ್.ಐ. ಸಂಘಟನೆಯನ್ನು ಕಟ್ಟುವಲ್ಲಿ ಶ್ರಮಿಸಿ ಹುತಾತ್ಮರಾದ ಸಂಗಾತಿಗಳಿಗೆ ಶ್ರದ್ಧಾಂಜಲಿಯನ್ನರ್ಪಿಸಲು ಹುತಾತ್ಮ ಸ್ಮಾರಕ'ಕ್ಕೆ ಪುಷ್ಪಗಳನ್ನರ್ಪಿಸಿ ಕೆಂಪು ವಂದನೆಗಳೊಂದಿಗೆ ಹುತಾತ್ಮರ ಆಶಯಗಳನ್ನು ಸಾಧಿಸಲು ಪಣತೊಡಲಾಯಿತು. ಶಿಸ್ತು ಬದ್ಧವಾಗಿ ನಡೆದ ಈ ಕಾರ್ಯಕ್ರಮದ ಮಂಚೂಣಿಯಲ್ಲಿ ಅತಿಥಿಗಳು ಗಣ್ಯರನೇಕರಿದ್ದರು. ತರುವಾಯ ಆರಂಭಗೊಂಡ ಸಮ್ಮೇಳನದಉದ್ಘಾಟನಾಸಮಾರಂಭದ ಅಧ್ಯಕ್ಷತೆಯನ್ನು ಕಾಂ.ಆರ್. ಜಯಕುಮಾರ್ ವಹಿಸಿದ್ದರು. ಸ್ವಾಗತ ಸಮಿತಿಯ ಅಧ್ಯಕ್ಷರಾದ ಡಾ. ಬಿ. ಜಿ. ಜವಳಿಯವರು ಸರ್ವರನ್ನು ಈ ಸಮಾರಂಭಕ್ಕೆ ಸ್ವಾಗತಿಸಿದರು. ಎಸ್‌ಎಫ್.ಐ.ಸಂಗಾತಿಗಳನ್ನೊಳಗೊಂಡು ರಾಷ್ಟ್ರೀಯ ಸಮಗ್ರತೆ ಹಾಗೂ ಪ್ರಗತಿಪರ ಪ್ರಜಾಸತ್ತಾತ್ಮಕ ಮತ್ತು ರೈತ-ಕಾರ್ಮಿಕ ಚಳುವಳಿಯನ್ನು ಕಟ್ಟಿ ಬೆಳೆಸುವಲ್ಲಿ ಶ್ರಮಿಸಿ ಹುತಾತ್ಮರಾದವರಿಗೆ ರಾಜ್ಯ ಸಮಿತಿಯ ಪರವಾಗಿ ಕಾಂ. ಎಸ್. ಗುರುಶಾಂತ್ ಶ್ರದ್ಧಾಂಜಲಿ ನಿರ್ಣಯವನ್ನು ಮಂಡಿಸಿದ ತರುವಾಯ ಸಮ್ಮೇಳನವು ಹುತಾತ್ಮರ ಗೌರವಾರ್ಥ ಎದ್ದು ನಿಂತು ಒಂದು ನಿಮಿಷದ ಮೌನ ಸೂಚಿಸಿತು. ಕಾಂ. ಜಯಕುಮಾರ್, ಕಾಂ. ಗುರುಶಾಂತ್, ಎನ್. ರಾಜಣ್ಣ ನವರನ್ನೊಳಗೊಂಡ ಅಧ್ಯಕ್ಷ ಮಂಡಳಿಯನ್ನು ಚುನಾಯಿಸಲಾಯಿತು. ನಿರ್ಣಯ ಮಂಡಳಿ ಸಂಚಾಲಕರಾಗಿ ಕಾಂ. ಸುನಿಲ್ ನಟೇಕರ್, ಪರಿಚಯ ಪತ್ರ ಮಂಡಳಿಗೆ ಕಾಂ.ಜಿ.ಸಿ.ಬೈಯಾರೆಡ್ಡಿ ಸಂಚಾಲಕರಾಗಿದ್ದ ಸಮಿತಿಗಳು ಚುನಾಯಿಸಲಾಯಿತು. ಕಾಂ.ಕಾಂತಿಬಿಸ್ವಾಸ್ ಪ.ಬಂಗಾಳ ಎಡರಂಗ ಸರ್ಕಾರದ ಶಿಕ್ಷಣ ಮಂತ್ರಿಗಳು, ಸಮ್ಮೇಳನದ ಉದ್ಘಾಟನೆಯನ್ನು ನೆರವೇರಿಸಿದರು. ಗುಲ್ಬರ್ಗಾ ವಿ.ವಿ.ಉಪಕುಲಪತಿಗಳಾದ ಡಾ. ಕೆ.ಹೆಚ್. ಚೆಲುವರಾಜ್ ಅವರು ಶುಭಾಶಯವನ್ನು ತಿಳಿಸಿಮಾತನಾಡಿದರು ಸಿ.ಐ.ಟಿ.ಯು. ಪರವಾಗಿ ಕಾಂ.ಎನ್. ಕೆ. ಉಪಾಧ್ಯಾಯರು, ಕರ್ನಾಟಕ ಪ್ರಾಂತ ರೈತ ಸಂಘದಿಂದ ಕಾಂ. ಕಿರಣಗಿಯವರು, ಡಿ.ವೈ.ಎಫ್.ಐ.ನಿಂದ ಲಾಲ್ ಅಹ್ಮದ್ ಸಂಗೊಳ್ಳಿ ವಿ.ವಿ. ಶಿಕ್ಷಕೇತರ ಸಂಘದ ಕಾಂ.ಎಂ. ಬಿ.ಸಜ್ಜನ್ ಅವರುಗಳು ಶುಭಾಶಯ ಕೋರಿ ಮಾತನಾಡಿದರು. ಎ.ಐ.ಡಿ.ಡಬ್ಲ್ಯು.ಎ, ಬಿ.ಇ.ಎಫ್.ಐ. ಯಿಂದ ಶುಭಾಶಯ ತಂತಿ ಸಂದೇಶ ಓದಲಾಯಿತು.

ಸಿ.ಪಿ.ಐ.(ಎಂ) ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಂ. ಇ.ಎಂ.ಎಸ್. ಪ.ಬಂಗಾಳ ಮುಖ್ಯ ಮಂತ್ರಿ ಜ್ಯೋತಿ ಬಸು, ಕೇರಳ ಮುಖ್ಯಮಂತ್ರಿ ಇ.ಕೆ. ನಾಯನ್ರ್ ತ್ರಿಪುರ ಮುಖ್ಯ ಮಂತ್ರಿ ನೃಪೇನ್ ಚಕ್ರವರ್ತಿಯವರುಗಳು ಶುಭಾಶಯ ಸಂದೇಶ ಕಳುಹಿಸಿದ್ದರು.

ಮಧ್ಯಾಹ್ನ ಆರಂಭಗೊಂಡ ಪ್ರತಿನಿಧಿಗಳ ಅಧಿವೇಶನದಲ್ಲಿ ರಾಜ್ಯ. ಕಾರ್ಯದರ್ಶಿ ಕಾಂ.ಎಸ್.ಆರ್. ಆರಾಧ್ಯರವರು ಕರಡು ವರದಿಯನ್ನು ಮಂಡಿಸಿದರು. ಅದರ ಮುಖ್ಯ ಅಂಶಗಳನ್ನು ವಿಶ್ಲೇಷಿಸಿದರು. ಕರಡು ವರದಿಯ ಮೇಲೆ 18 ಜಿಲ್ಲೆಗಳ 165 ಪ್ರತಿನಿಧಿಗಳನ್ನು ಪ್ರತಿನಿಧಿಸಿ 56 ಸಂಗಾತಿಗಳು ತುಂಬಾ ಉಪಯುಕ್ತವಾದ ಚರ್ಚೆಯನ್ನು ನಡೆಸಿದರು. ಎಸ್.ಎಫ್.ಐ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿಗಳಾದ ಕಾಂ. ನೀಲೋತ್ಪಲ ಬಸು ಅವರು ಕೇಂದ್ರ ಸಮಿತಿ ಹಾಗೂ ಒಂದೂವರೆ ಮಿಲಿಯ ಸದಸ್ಯರ ಪರವಾಗಿ ಶುಭಾಶಯಗಳನ್ನು ತಿಳಿಸುತ್ತಾ ಭಾರತೀಯ ವಿದ್ಯಾರ್ಥಿ ಚಳುವಳಿ, ಎಸ್.ಎಫ್.ಐ. ಸ್ಥಾಪನೆಯ ಹಿನ್ನೆಲೆ ಅಂತರಾಷ್ಟ್ರೀಯ ಅನುಭವದ ಮುನ್ನಡೆ ಹಾಗೂ ಸೈದ್ಧಾಂತಿಕ-ಸಂಘಟನಾತ್ಮಕ ವಿಷಯಗಳ ಬಗ್ಗೆ ವಿವರಿಸಿದರು. ಹಣಕಾಸಿನ ವರದಿಯನ್ನು ಕಾಂ. ಶಾಂತಕುಮಾರಿಯವರು ಮಂಡಿಸಿದರು. ಕರಡು ವರದಿಯ ಮೇಲೆ ಚರ್ಚೆ ಮುಗಿದ ಬಳಿಕ ರಾಜ್ಯ ಕಾರ್ಯದರ್ಶಿಯವರು ಉತ್ತರ ನೀಡಿದರು. ನಿರ್ಣಯಗಳ ಸಮಿತಿ, ಪರಿಚಯ ಪತ್ರ ಪರಿಶೀಲನಾ ಸಮಿತಿಗಳು ವರದಿಯನ್ನು ಮಂಡಿಸಿದರು. ಮುಂದಿನಸಂಘಟನಾ ಯೋಜನೆಯೊಂದನ್ನು ಸಮ್ಮೇಳನದಲ್ಲಿ ಅಂಗೀಕರಿಸಲಾಯಿತು.

ಸಮ್ಮೇಳನದ ಅಂಗವಾಗಿ ಹೊರತಂದ ಸ್ಮರಣ ಸಂಚಿಕೆಯನ್ನು ಗುಲ್ಬರ್ಗಾ ವಿ.ವಿ.ಪರೀಕ್ಷಾ ನಿಯಂತ್ರಣಾಧಿಕಾರಿ ಶಿವಕುಮಾರ್ ಚಿಟ್ಟಿಯವರು ಬಿಡುಗಡೆ ಮಾಡಿದರು.

25 ಸದಸ್ಯರುಳ್ಳ ನೂತನ ರಾಜ್ಯ ಸಮಿತಿ ಹಾಗೂ ಪದಾಧಿಕಾರಿಗಳನ್ನು ಚುನಾಯಿಸಲಾಯಿತು. ಹಿಂದಿನ ರಾಜ್ಯ ಸಮಿತಿ ಬಿಡುಗಡೆಯಾದ ಪದಾಧಿಕಾರಿಗಳು ಹಾಗೂ ಸದಸ್ಯರುಗಳಿಗೆ ಬೀಳ್ಕೊಡುಗೆ ಸಮಾರಂಭವನ್ನು ಅಧ್ಯಕ್ಷ ಕಾಂ. ಬಯ್ಯಾರೆಡ್ಡಿಯವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಬೀಳ್ಕೊಂಡ ಸಂಗಾತಿಗಳಿಗೆ ಸ್ವಾಗತ ಸಮಿತಿಯು ನೆನಪಿನ ಕಾಣಿಕೆಯನ್ನು ನೀಡಿದ್ದು ಕಾರ್ಯದರ್ಶಿ ಕಾಂ. ಗುರುಶಾಂತ್ ವಿತರಣೆ ಮಾಡಿದರು. ಬಿಡುಗಡೆ ಹೊಂದಿದ ಸಂಗಾತಿಗಳಿಗೆ ಧನ್ಯವಾದಗಳನ್ನು ಅರ್ಪಿಸಲಾಯಿತಲ್ಲದೇ, 'ವಿಷಲ್ ಓವರ್ ಕವರ್' ಅಂತರಾಷ್ಟ್ರೀಯ ಗೀತೆಯೊಂದಿಗೆ ಸಮ್ಮೇಳನದ ಕಲಾಪಗಳು ಮುಕ್ತಾಯಗೊಂಡವು. ಸ್ವಾಗತ ಸಮಿತಿ ಅಧ್ಯಕ್ಷರಾದ ಕಾಂ. ಸಿ.ಎ. ಪಾಟೀಲ್. ಧನ್ಯವಾದಗಳನ್ನು ಸಲ್ಲಿಸಿದರು.

ನೂತನ ರಾಜ್ಯ ಸಮಿತಿ

ಅಧ್ಯಕ್ಷ ಕಾ|| ಜಿ.ಸಿ. ಬೈಯಾರೆಡ್ಡಿ (ಕೋಲಾರ)
ಉಪಾಧ್ಯಕ್ಷರು : ರಾಮನಗೌಡ (ರಾಯಚೂರು)
: ಶಾಂತರಾಂ ನಾಯಕ್ (ಉ.ಕ)
: ಕೆ. ಶ್ರೀಮತಿ, (ಬೆಂಗಳೂರು)
ಕಾರ್ಯದರ್ಶಿ : ಎಸ್.ವೈ. ಗುರುಶಾಂತ್ (ಬಳ್ಳಾರಿ)
ಸಹ ಕಾರ್ಯದರ್ಶಿಗಳು : ಎಲ್. ಮಂಜುನಾಥ್ (ಬಳ್ಳಾರಿ)
: ರಾಜೇಂದ್ರನ್ (ಬೆಂಗಳೂರು)
: ಕೃಷ್ಣಪ್ಪ ಕೊಂಚಾಡಿ (ದ.ಕ.)

ರಾಜ್ಯ ಸಮಿತಿ ಸದಸ್ಯರು :

ಆರ್.ಮೋಹನ್, ಲಕ್ಷ್ಮೀನಾರಾಯಣ, ಷಣ್ಮುಖಪ್ಪ, ಕುಮಾರಿ ಸುಧಾ, ಕೃಷ್ಣಪ್ಪ, ಜಿ. ರಾಮಕೃಷ್ಣ, ಕೃಷ್ಣ ಜಕಲಾಲ್, ಸಾದಿಕ್ ಸೌದಾಗರ್, ಬಿ.ಎಸ್. ಭಜಂತ್ರಿ, ಶ್ರೀಧರಕುಲಕರ್ಣಿ, ಸಿದ್ದಪ್ಪ, ಉಮೇಶ್, ಇಜಂತ್‌ಕರ್, ಸಿಂಗಣ್ಣ ಪೊರಟಗಿ,

ರೈತ ನಾಯಕರ ಮೇಲಿನ ಹಲ್ಲೆ ಖಂಡನೆ

ಬೆಳ್ತಂಗಡಿ ತಾಲೋಕು ಮಚ್ಚಿನ ಗ್ರಾಮ ರೈತ ಸಂಘದ ಅಧ್ಯಕ್ಷ ಕಾಂ ಪಿ ಸೀತಾರಾಮ ಭಟ್ ದೂರು ನೀಡಲು ಪುತ್ತೂರಿಗೆ ಹೋದಾಗ ಅಲ್ಲಿನ ಡಿ.ಎಸ್.ಪಿ. ಅವಾಚ್ಯ ಶಬ್ದಗಳಿಂದ ಬೈದು ಭೂಮಾಲಿಕರ ಪರ ವರ್ತಿಸಿದಲ್ಲದೆ. ಎಸ್.ಐ.ಗೆ ಸುಳ್ಳು ಮೊಕದ್ದಮೆ ದಾಖಲು ಮಾಡುವಂತೆ ಆದೇಶ ನೀಡಲಾಯಿತು. ಒಂದುವರೆ ದಿನಗಳ ಕಾಲ ಬೆಳ್ತಂಗಡಿ ಠಾಣೆಯಲ್ಲಿ ಸೀತಾರಾಮ ಭಟ್‌ರನ್ನು ಅಕ್ರಮ ಬಂಧನ

(8ನೇ ಪುಟನೋಡಿ)

ಕಾಂತಿ ಬಿಸ್ವಾಸ್‌ರವರ ಉದ್ಘಾಟನಾ ಭಾಷಣ

ಪ. ಬಂಗಾಳ ಎಡರಂಗ ಸರ್ಕಾರದ ಶಿಕ್ಷಣ ಮಂತ್ರಿಗಳಾದ ಕಾ|| ಕಾಂತಿ ಬಿಸ್ವಾಸ್‌ರವರು ಗುಲ್ಬರ್ಗಾದಲ್ಲಿ ನಡೆದ ಎಸ್. ಎಫ್. ಐ. 5 ನೇ ಸಮ್ಮೇಳನ ಉದ್ಘಾಟಿಸಿ ಮಾಡಿದ ಭಾಷಣದ ಸಾರಾಂಶವನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ.

ಎಸ್. ಎಫ್. ಐ. 16 ಲಕ್ಷಕ್ಕೂ ಹೆಚ್ಚು ಸದಸ್ಯತ್ವವನ್ನೊಳಗೊಂಡಭಾರತದ ಅತಿ ದೊಡ್ಡ ವಿದ್ಯಾರ್ಥಿ ಸಂಘಟನೆ ನಿಮ್ಮದಾಗಿದೆ. ಅಂತರಾಷ್ಟ್ರೀಯ ವಿದ್ಯಾರ್ಥಿ ಸಂಘ [ಐ. ಯು. ಎಸ್.] ಸಹ ಈ ಗಮನಾರ್ಹ ಬೆಳವಣಿಗೆಯನ್ನು ಪರಿಗಣಿಸಿ ಸದಸ್ಯತ್ವವನ್ನು ನೀಡಿದೆ. ಜನತೆಯನ್ನು ಶೋಷಣೆಯಿಂದ ಬಿಡುಗಡೆಗೊಳಿಸುವ ಹೋರಾಟದಲ್ಲಿ ಎಸ್. ಎಫ್. ಐ. ಭಾಗವಹಿಸುತ್ತಾ ಬೆಳೆಯುತ್ತಿದ್ದು, ತಮ್ಮೆಲ್ಲರಿಗೂ ನನ್ನ ಹಾಗೂ ಪ. ಬಂಗಾಳದ ಜನತೆ ಪರವಾಗಿ ಶುಭಾಶಯಗಳು.

3 ನೇ ವಿಶ್ವ ಸಮರಕ್ಕಾಗಿ ಸಾಮ್ರಾಜ್ಯಶಾಹಿ ಶಕ್ತಿಗಳು ತವಕಿಸುತ್ತಿರುವ ಸಂದರ್ಭದಲ್ಲಿ ಈ ಸಮ್ಮೇಳನ ಜರುಗುತ್ತಿದೆ. ಜಗತ್ತಿನ ಮೂರನೇ ಒಂದು ಭಾಗದ ಜನತೆ ಅನ್ನವಿಲ್ಲದೆ ಬವಣೆ ಪಡುತ್ತಿದ್ದರೆ, ಕೋಟ್ಯಾಂತರ ರೂ. ಗಳನ್ನು ಶಸ್ತ್ರಾಸ್ತ್ರ ತಯಾರಿಸಲು ಭೂಮಿಯ ಸರ್ವನಾಶಕ್ಕೆ ವಿನಿಯೋಗಿಸಲಾಗುತ್ತಿದೆ. ಅಣ್ವಸ್ತ್ರಗಳ ತಯಾರಿಕೆಗೆ ಖರ್ಚು ಮಾಡುತ್ತಿರುವುದರಲ್ಲಿ 5 ನಿಮಿಷದ ವೆಚ್ಚವನ್ನುಳಿಸಿದರೆ ನೂರಾರು ಶಾಲಾ ಕಟ್ಟಡಗಳನ್ನು ನಿರ್ಮಿಸಬಹುದು. ವಿಶ್ವದ ಒಟ್ಟು ಅನಕ್ಷರಸ್ಥರ ಪೈಕಿ ಶೇ. 50 ಭಾಗ ಭಾರತದಲ್ಲೇ ಇದ್ದಾರೆ. 1901 ರಲ್ಲಿ ಅಕ್ಷರತೆಯ ಪ್ರಮಾಣ ಶೇ. 6 ಇದ್ದು 86 ವರ್ಷಗಳ ನಂತರ ಕೇವಲ ಶೇ. 30 ಮಾತ್ರ ಹೆಚ್ಚಿದೆ. ಶೈಕ್ಷಣಿಕ ಅಭಿವೃದ್ಧಿಯಲ್ಲಿ ವಿಶ್ವದ 12 ನೇ ಸ್ಥಾನದಲ್ಲಿ ಭಾರತ ನಿಲ್ಲುತ್ತದೆ. ಈ ಹಿಂದುಳಿವಿಕೆ ಕುರಿತು ಚಿಂತಿಸಬೇಕಿದೆ. ಇರುವ ಶೇ. 36 ಅಕ್ಷರಸ್ಥರ ನಿರುದ್ಯೋಗಿಗಳ ಸೈನ್ಯವೇ ಬೆಳೆಯುತ್ತಿದೆ. ಟಿ.ವಿ, ವಿಡಿಯೋ, ಸಿನಿಮಾದಂತಹ ಸಮೂಹ ಮಾಧ್ಯಮಗಳ ಮೂಲಕ ಯುವ ಜನರ ಚಿನ್ನಲುಬನ್ನು ಮುರಿಯಲಾಗುತ್ತಿದೆ. ಜನತೆಯ ಗಮನವನ್ನು ಬೇರೆಡೆ ಸೆಳೆದು ಸಂಘಟಿತರಾಗದಂತೆ ತಡೆಯುತ್ತಿದೆ. ಟಿ.ವಿ. ಯಲ್ಲಿ ಭಾರತ ಸರ್ಕಾರವೇ ವಯಸ್ಕರ ಚಲನ ಚಿತ್ರಗಳನ್ನು ಬಿತ್ತರಿಸುತ್ತಿದೆ. ಹೆರಾಯಿನ್, ಬ್ರೌನ್, ಶುಗರ್, ಚರಸ್ಸ ಗಾಂಜಾದಂತಹ ಮಾದಕ ವಸ್ತುಗಳು ದೇಶದೊಳಗೆ ಸರಾಗವಾಗಿ ಸಾಗಿ ಬರುತ್ತಿದ್ದು ಯುವ ಜನತೆ ಈ ದುಶ್ಚಟಕ್ಕೆ ಬಲಿಯಾಗಿದ್ದಾರೆ. ಈ ವಿಷಯ ಸರ್ಕಾರಕ್ಕೆ ಗೊತ್ತಿದ್ದರೂ ತಡೆಗಟ್ಟಲಾಗಿಲ್ಲವೇಕೆ ? ಪ್ರಧಾನಿ ರಕ್ಷಣೆ ಖಾತೆಯ "ಬ್ಲಾಕ್ ಕ್ಯಾಟ್ ಕಮೋಂಡೊ" ಗಳಿಗಾಗಿ ಲಕ್ಷಾಂತರ ರೂ ಗಳನ್ನು ಖರ್ಚು ಮಾಡಲಾಗುತ್ತಿದೆ. ರಾಜೀವರನ್ನು ಒಂದು ದಿನ ಗುಪ್ತವಾಗಿ ಅಡಗಿಸಿಟ್ಟರೆ ಆ ದಿನದ ರಕ್ಷಣಾ ವೆಚ್ಚದಿಂದ 10 ಶಾಲೆಗಳನ್ನು ಕಟ್ಟಬಹುದು.

ಕರ್ನಾಟಕದ ಶೇ. 73 ಪ್ರಾಥಮಿಕ ಶಾಲೆಗಳಲ್ಲಿ ಏಕೋಪಾಧ್ಯಾಯರಿದ್ದಾರೆ. ಬೆತ್ತಲೆ ಸೇವೆಯಂತಹ ಮೂಢ ನಂಬಿಕೆಗಳೂ ಈ ರಾಜ್ಯದಲ್ಲಿವೆ.

ದೇಶದ ಒಟ್ಟು 436 ನವೋದಯ ಶಾಲೆಗಳಿಗೆ ಕೇಂದ್ರದ ಹಣಕಾಸಿನಲ್ಲಿ 500 ಕೋಟಿ ಮಂಜೂರು ಮಾಡಿದ್ದು, 55 ಸಾವಿರ ಮಾಧ್ಯಮಿಕ ಶಾಲೆಗಳಿಗೆ ಕೇವಲ 40 ಕೋಟಿ ರೂ ನೀಡಿದೆ. ಏಷ್ಯಾ ದೇಶಗಳಲ್ಲಿ 17 ರಿಂದ 23 ವಯಸ್ಸಿನ ಶೇ.23 ಪ್ರಮಾಣ ವಿದ್ಯಾರ್ಥಿಗಳು ಕಾಲೇಜುಗಳಲ್ಲಿ ದಾಖಲಾದರೆ ಈ ಪ್ರಮಾಣ ಭಾರತದಲ್ಲಿ ಕೇವಲ ಶೇ.4.5 ಹೊಸ ಶಿಕ್ಷಣ ನೀತಿಯು ಪ್ರಕಾರ ಹೊಸ ವಿಶ್ವವಿದ್ಯಾಲಯಗಳ ಸ್ಥಾಪನೆ ಇಲ್ಲ.

1950 ರಲ್ಲಿ ಸಾಮಾನ್ಯ ಕಾಲೇಜು ವಿದ್ಯಾರ್ಥಿಗಳ ಶಿಕ್ಷಣದ ವಾರ್ಷಿಕ ವೆಚ್ಚ ತಲಾ 231 ರೂ ಇದ್ದು 75-76 ರಲ್ಲಿ ರೂ 176ಕ್ಕೆ ಇಳಿಯಿತು. ವೈದ್ಯಕೀಯ ಇಂಜಿನಿಯರಿಂಗ್ ಕೋರ್ಸ್‌ಗಳಿಗೆ ತಲಾ ವಾರ್ಷಿಕ 779ರೂ ಇದ್ದು 75-76ರಲ್ಲಿ 450ರೂಕ್ಕೆ ಇಳಿಯಿತು. ಇದು ಜನರ ವಿರೋಧಿ ನೀತಿ. ಕೇಂದ್ರವು ಈಗ ಶಿಕ್ಷಣದ ತಲಾದಾಯವನ್ನು ರೂ 16ಕ್ಕೆ ಇಳಿಸಿದೆ ಪ.ಬಂಗಾಳದಲ್ಲಿ 45 ಲಕ್ಷ ನಿರುದ್ಯೋಗಿಗಳಿದ್ದಾರೆ. ಕೈಗಾರಿಕಾ ರಂಗದಲ್ಲಿ ಶೇ80 ಭಾಗ ಬಂಗಾಲಿಯೇತರ ಕಾರ್ಮಿಕರಿದ್ದು, ಈ ವಿದ್ಯಾವಂತ ಜನತೆ ಅವರನ್ನು ಹೊರದೂಡುವ ಸಂಕುಚಿತ ಪ್ರವೃತ್ತಿ ಹೊಂದಿಲ್ಲ. ವಿದ್ಯಾರ್ಥಿ ಸಮುದಾಯ ಎದುರಿಸುತ್ತಿರುವ ಕ್ಯಾಪಿಟೇಷನ್ ಶುಲ್ಕ ನಾಚಿಕೆಗೇಡಿನ ವಿಷಯವಾಗಿದ್ದು, ಕರ್ನಾಟಕ,

(8ನೇ ಪುಟ ನೋಡಿ)

ಕಮ್ಯುನಿಸ್ಟರು ಮತ್ತು ಭಾರತೀಯ ಜನತಾಪಕ್ಷ

ಇ. ಎಂ. ಎಸ್. ನಂಬೂದಿರಿಪಾದ್

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯು ಸಭೆ ಜನವರಿ 4 ರಿಂದ 7ರ ವರೆಗೆ ಕಲ್ಕತ್ತಾದಲ್ಲಿ ಸೇರಿ ಕಳೆದ ಐದು ತಿಂಗಳ ಬೆಳವಣಿಗೆಗಳನ್ನು ವಿಮರ್ಶಿಸಿ ಮಾರ್ಚ್ ತಿಂಗಳಲ್ಲಿ ನಡೆಯುವ 'ಭಾರತ ಬಂದ್'ನ್ನು ಯಶಸ್ವಿಗೊಳಿಸುವ ಸಲುವಾಗಿ ತಮ್ಮೆಲ್ಲ ಶಕ್ತಿಯನ್ನು ಪಯೋಗಿಸಿ ಶ್ರಮಿಸಬೇಕೆಂದು ತನ್ನ ಎಲ್ಲ ಪಾರ್ಟಿ ಘಟಕಗಳಿಗೂ, ಸಾಮೂಹಿಕ ಸಂಘಟನೆಗಳಲ್ಲಿ ಕೆಲಸ ಮಾಡುತ್ತಿರುವ ಸದಸ್ಯರಿಗೂ ಕರೆ ನೀಡಿದೆ.

ಇದಕ್ಕೆ ಸಮಾಂತರವಾಗಿ ಭಾರತೀಯ ಜನತಾ ಪಾರ್ಟಿಯ ರಾಷ್ಟ್ರೀಯ ಕಾರ್ಯಕಾರಿಣಿ ಸಭೆ ಕೊಚ್ಚಿನ್‌ನಲ್ಲಿ ಸೇರಿ ಎಡ ಶಕ್ತಿಗಳ ಅದರಲ್ಲೂ ಮುಖ್ಯವಾಗಿ ಸಿ.ಪಿ.ಐ (ಎಂ) ವಿರುದ್ಧ ಹೋರಾಡಬೇಕೆಂದು ಕರೆ ಕೊಟ್ಟಿದೆ. ಅದರ ಆ ಸಭೆ ಪ್ರಾರಂಭವಾಗುತ್ತಿರುವಂತೆಯೇ ತಮ್ಮ ನಿರ್ಣಯಕ್ಕೆ ಪುರವಣಿಯಾಗಿ "ಮಹಾ ವಿಶ್ವಾಸ ಘಾತುಕರು" ಎಂಬ ಶಿರೋನಾಮೆಯಲ್ಲಿ ಒಂದು ಕರಪತ್ರವನ್ನು ಹೊರಡಿಸಿದ್ದರು.

ಈ ಸಮಯದಲ್ಲಿ ಇಂಥ ಕಮ್ಯುನಿಸ್ಟ್ ವಿರೋಧಿ ಆಕ್ರೋಶ ಯಾಕೆ? ಕೇರಳ ಹಾಗೂ ಅಖಿಲ ಭಾರತ ಮಟ್ಟದಲ್ಲಿ ಬಿಜೆಪಿಯ ರಾಜಕೀಯ ಚುನಾವಣಾ ಶಕ್ತಿಯ ಒಳಗುಟ್ಟನ್ನು ಎಡ ಶಕ್ತಿಗಳು ಪೂರ್ಣ ಬಯಲುಗೊಳಿಸಿವೆ. ಒಂದೆಡೆ ಕಾಂಗ್ರೆಸ್ಸನ್ನು ಮತ್ತೊಂದೆಡೆ ಕಮ್ಯುನಿಸ್ಟರನ್ನು ವಿರೋಧಿಸಿ ತಾನು ಮೂರನೇ ಶಕ್ತಿಯಾಗಿ ತೋರಿಸಿಕೊಡುತ್ತೇನೆಂಬ ಬಿಜೆಪಿ ಹಿಂದು ಮುನ್ನಾನಿಯ ಆಕಾಂಕ್ಷೆಯನ್ನು ಕೇರಳದ ಎಡ ಪ್ರಜಾಪ್ರಭುತ್ವ ರಂಗದ ವಿಜಯ ಮಣ್ಣು ಪಾಲು ಮಾಡಿದೆ ದೇಶದ ಇತರೆಡೆಗಳಲ್ಲಿ ಕೂಡ ಎಡಶಕ್ತಿ ಜಾತ್ಯಾತೀತ ವಿರೋಧ ಪಕ್ಷಗಳ ಸಾಹಜಿಕ ಸಂಗಾತಿಯಾಗಿ ಬೆಳೆದು ಬರುತ್ತಿದೆ ಅದರಿಂದಾಗಿ ಕಾಂಗ್ರೆಸ್ಸಿಗೆ ಭ್ರಮ ನಿರಸನವಾಗಿದೆ. ಇದೇನು ತೋರಿಸಿ ಕೊಡುತ್ತದೆಂದರೆ, ಬಿ.ಜೆ.ಪಿ.ಯು ಏಕೈಕವಾಗಿಯಾಗಲಿ ಕಾಂಗ್ರೆಸ್ಸಿಗೆ ಪರ್ಯಾಯವಾಗಲು ಸಾಧ್ಯವಿಲ್ಲ.

ಇಂಥ ಪರಿಸ್ಥಿತಿಯಲ್ಲಿ ಬಿ.ಜೆ.ಪಿ. ಆರ್.ಎಸ್.ಎಸ್.ಸರ ಸಂಘ ಚಾಲಕರಾದ ಬಾಳಾ ಸಾಹೇಬ ದೇವರಸ್ ಅವರು ಉಪಾಯ ತೋರಿಸಿಕೊಟ್ಟರು. ವಿಜಯ ದಶಮಿಯ ದಿವಸ ಬಿ.ಜೆ.ಪಿ, ಮುಖಂಡರನ್ನೊಳಗೊಂಡ ಆರ್.ಎಸ್ ಎಸ್. ಕಾರ್ಯಕರ್ತರನ್ನುದ್ದೇಶಿಸಿ ಮಾಡಿದ ಭಾಷಣದಲ್ಲಿ "ನಾವು ಕಾಂಗ್ರೆಸ್ ವಿರೋಧಿಗಳಲ್ಲ. ನಮ್ಮ ಸಂಸ್ಥಾಪಕ ಮುಖಂಡ ಒಬ್ಬ ಕಾಂಗ್ರೆಸ್ಸಿನವನಾಗಿದ್ದ. ಅಲ್ಪ ಮತಸ್ಥರನ್ನು ಸಮಜಾಯಿಸುವ ಕಾಂಗ್ರೆಸ್ಸಿನ ನೀತಿಗಷ್ಟೇ ನಾವು ವಿರೋಧ" ಎಂದು ಹೇಳಿದ್ದಾರೆ.

ಆ ಭಾಷಣದಿಂದ ಗೊಂದಲಕ್ಕೀಡಾದ ಬಿ.ಜೆ.ಪಿ. ಮುಖಂಡರು ತಾವು ಯಾವ ಧೋರಣೆ ಅನುಸರಿಸಬೇಕೆಂಬುವರ ಕುರಿತು ಉಪದೇಶ ಕೇಳಲು ನಾಗಪುರಕ್ಕೆ ಆರ್.ಎಸ್.ಎಸ್. ಮುಖಂಡರು ನೀಡಿದ ಸ್ಪಷ್ಟೀಕರಣವನ್ನ ಬಿ.ಜೆ.ಪಿ. ಅಧ್ಯಕ್ಷರು "ಹಳೇಕಾಲದಲ್ಲಿ ಕಾಂಗ್ರೆಸ್ಸಿನವರು ಮಹಾತ್ಮಾಗಾಂಧಿಯವರಿಂದ ಪಡೆಯುತ್ತಿದ್ದ ಸಲಹೆಯಂತೆ" ಎಂದು ವಿವರಿಸಿದ್ದಾರೆ. ಸಲಹೆ ಕೇಳಲಾಯಿತು. ಅದನ್ನು ಪಡೆಯಲಾಯಿತು. ಆ ದಾರಿಯಲ್ಲಿ ಹೋಗುವುದು ಬಿ.ಜೆ.ಪಿ ಮುಖಂಡರ ಕರ್ತವ್ಯ. ಅಂದರೆ ಕಾಂಗ್ರೆಸ್ಸಿನವರು "ಅಲ್ಪ ಮತಸ್ಥರನ್ನು ಸಮಜಾಯಿಸುವುದನ್ನು ಬಿಟ್ಟರೆ ಕಾಂಗ್ರೆಸ್ಸನ್ನು ರಾಜಕೀಯ ವಿರೋಧಿಯೆಂದು ಪರಿಗಣಿಸದೆ, ಗೆಳೆಯ ಹಾಗೂ ಸಂಗಾತಿಯೆಂದು ಪರಿಗಣಿಸುವುದು.

ಅಧ್ಯಾತ್ಮಿಕ ನೇತನ ಸಲಹೆಯನ್ನು ತರಾತುರಿಯಿಂದ ಸ್ವೀಕರಿಸಿ ಕಾರ್ಯರೂಪದಲ್ಲಿ ತರಲು ಧಾವಿಸಿದರು, ಕೇರಳದ ಬಿ.ಜೆ.ಪಿ. ಮುಖಂಡರು. ಕೇರಳದಲ್ಲಿ ನಡೆಯುತ್ತಿರುವ ಪಂಚಾಯತ್ ಮತ್ತು ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ "ಕಮ್ಯುನಿಸ್ಟರನ್ನು ಸೋಲಿಸಲು" ಕಾಂಗ್ರೆಸ್ಸಿನ ಜೊತೆಯಲ್ಲಿ ಸೇರುವ ಇಚ್ಛೆ ವ್ಯಕ್ತ ಪಡಿಸಿದರು. ಕೇರಳದಲ್ಲಿ ಕಾಂಗ್ರೆಸ್ ಈಗಾಗಲೇ ಮುಸ್ಲಿಂಲೀಗ್ ಮತ್ತು ಕ್ರಿಶ್ಚನ್ ಪ್ರಭಾವಿತ ಕೇರಳ ಕಾಂಗ್ರೆಸ್ ಜೊತೆಯಲ್ಲಿ ರಂಗ ರಚಿಸಿಕೊಂಡಿರುವುದರಿಂದ ಬಿ.ಜೆ.ಪಿ.ಯ ಸೂಚನೆಗೆ ತಲೆದೂಗಿ ಈ ಚುನಾವಣೆಯಲ್ಲಿ ಬಿ.ಜೆ.ಪಿ.-ಹಿಂದು ಮುನ್ನಾನಿಗೆ ಸಾಕಷ್ಟು ಸ್ಥಾನ ಬಿಟ್ಟುಕೊಟ್ಟಿದೆ.

ಇದೊಂದು ರಾಜಕೀಯ ನಿರ್ಣಯವೆಂಬುದನ್ನು ಕಾಂಗ್ರೆಸ್ಸಾಗಲೀ, ಮುಸ್ಲಿಮ್‌ಲೀಗ್ ಕೇರಳ ಕಾಂಗ್ರೆಸ್ ಅಥವಾ ಬಿ.ಜೆ.ಪಿ. ಹಿಂದೂ ಮುನ್ನಾನಿಯೂ ಗಲೀ ಬಹಿರಂಗವಾಗಿ ಒಪ್ಪಿಕೊಳ್ಳುತ್ತಿಲ್ಲ. ಆ ಕಾರಣದಿಂದಲೇ ಅವರೆಲ್ಲ ಕಮ್ಯುನಿಸ್ಟ್ ಪಾರ್ಟಿ ಮೇಲೆ ಭೀಕರ ಧಾಳಿ ಪ್ರಾರಂಭಿಸಿದ್ದಾರೆ. "ಕಮ್ಯುನಿಸ್ಟರ ಹಿಂಸಾಚಾರ ಮತ್ತು ಬೆದರಿಕೆ" ಅವರೆಲ್ಲರ ಒಮ್ಮತದ ದಾಳಿಯಾಗಿದೆ. ಇದಕ್ಕೆ ಉತ್ತಮ ಸೈದ್ಧಾಂತಿಕ ಬಣ್ಣ ಹಚ್ಚುವ ಕಾರ್ಯ ಬಿ.ಜೆ.ಪಿ.ಮಾಡಿದೆ. ಅದು ಏನು ಹೇಳುತ್ತದೆಂದರೆ "ಇಂಡಿಯನ್ ನ್ಯಾಶನಲ್ ಕಾಂಗ್ರೆಸ್, ಇಂಡಿಯನ್ ಸೋಶಲಿಸ್ಟ್ ಪಾರ್ಟಿ ಅಥವಾ ಭಾರತೀಯ ಜನತಾ ಪಾರ್ಟಿಯಂತೆ ಇಲ್ಲಿ ಇಂಡಿಯನ್ ಕಮ್ಯುನಿಸ್ಟ್ ಪಾರ್ಟಿ ಇಲ್ಲ. ಸಿ.ಪಿ.ಐ. ಮತ್ತು ಸಿ.ಪಿ.ಐ. (ಎಂ) ಎಂದು ಕರೆಯಲಾಗುತ್ತಿರುವ ಪಕ್ಷಗಳು ಅಂತರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯ ಭಾರತದಲ್ಲಿಯ ಶಾಖೆಗಳು. ಅವರ ತಲೆ, ಹೃದಯ ಮತ್ತು ಹಣ ದೇಶದ ಹೊರಗಿವೆ. ಆ ವಿದೇಶಿ ಕೇಂದ್ರದಿಂದ ಅವರು ಸ್ಫೂರ್ತಿ ಮಾತ್ರ ಪಡೆಯುವುದಲ್ಲ ಅವರಿಂದ ಆಜ್ಞೆ ಕೂಡಾ ಪಡೆಯುತ್ತಾರೆ. ಈ ವಿಷಯದಲ್ಲಿ ಅವರ ವಿದೇಶಿ ಸಂಬಂಧ, ಪಾನ-ಇಸ್ಲಾಮಿಕ ಚಳುವಳಿಗಿಂತ ಬಲಿಷ್ಟವಾಗಿಲ್ಲದಿದ್ದರೂ ಅದರಷ್ಟೇ ಪ್ರಬಲವಾಗಿದೆ"

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಸಭೆ ಜನವರಿ 4 ರಿಂದ 7 ರ ವರೆಗೆ ಕಲ್ಕತ್ತಾದಲ್ಲಿ ಸೇರಿ ಕಳೆದ ಐದು ತಿಂಗಳ ಬೆಳವಣಿಗೆಗಳನ್ನು ವಿಮರ್ಶಿಸಿ ಮಾರ್ಚ್ ತಿಂಗಳಲ್ಲಿ ನಡೆಯುವ ಭಾರತ್ ಬಂದ್‌ನ್ನು ಅತ್ಯಂತಯಶಸ್ವಿಗೊಳಿಸುವ ಸಲುವಾಗಿ ತಮ್ಮೆಲ್ಲಾ ಶಕ್ತಿಯನ್ನುಪಯೋಗಿಸಿ ಶ್ರಮಿಸಬೇಕೆಂದು ತನ್ನ ಎಲ್ಲ ಪಾರ್ಟಿ ಘಟಕಗಳಿಗೂ, ಸಾಮೂಹಿಕ ಸಂಘಟನೆಗಳಲ್ಲಿ ಕೆಲಸ ಮಾಡುತ್ತಿರುವ ಸದಸ್ಯರಿಗೂ ಕರೆ ನೀಡಿದೆ.

ಅಂಥ "ವಿದೇಶಿ ಏಜನ್ಸಿ" 1957 ರಲ್ಲೇ ವಿಧಾನ ಸಭೆ ಚುನಾವಣೆಯಲ್ಲಿ ಬಹುಮತ ಪಡೆದು ಕಾಂಗ್ರೆಸ್ಸೇತರ ಸರಕಾರ ಸ್ಥಾಪಿಸಲು ಹೇಗೆ ಸಾಧ್ಯವಾಯಿತೆಂಬುದರ ಕುರಿತು ಬೆಳಕು ಚೆಲ್ಲುವರೆ? ಹತ್ತು ವರ್ಷಗಳ ನಂತರ ಎರಡು ರಾಜ್ಯಗಳಲ್ಲಿ ಸಂಯುಕ್ತ ಸರ್ಕಾರಗಳ ನೇತೃತ್ವ ವಹಿಸಿರುವುದು, ಈಗ 10 ವರ್ಷಗಳಿಂದ "ಆ ವಿದೇಶಿ ಏಜನ್ಸಿ" ಯಿಂದಲೇ ಎರಡು ಸರ್ಕಾರಗಳು ಆಡಳಿತೆ ನಡೆಸುತ್ತಿವೆ. ಅಷ್ಟೇ ಅಲ್ಲ, ಹಲವಾರು ವಿರೋಧ ಪಕ್ಷಗಳು ಎಡ ಪಕ್ಷಗಳು ತಮ್ಮ "ಸ್ವಾಭಾವಿಕ ಸಂಗಾತಿಗಳು" ಎಂದು ಈಗ ಪರಿಗಣಿಸಿ ಅದು ಹೇಗೆ ಸಾಧ್ಯ? ಸತತವಾಗಿ ಕಮ್ಯುನಿಸ್ಟರಿಗೆ ಮತ ನೀಡುತ್ತಿರುವ ಮಿಲಿಯ ಗಟ್ಲೆ ಮತದಾರರು, ಕಮ್ಯುನಿಸ್ಟರು ತಮ್ಮ ಸಂಗಾತಿಗಳೆಂದು ಭಾವಿಸುತ್ತಿರುವ ಹಲವಾರು ಪಕ್ಷಗಳು ಈ ಪಕ್ಷದ "ವಿದೇಶಿ ಸಂಬಂಧದ" ಕುರಿತು ಅಜ್ಞಾನಿಗಳಾಗಿದ್ದಾರೆಯೆ ?

ಆರ್. ಎಸ್. ಎಸ್. ಅಂದರೇನು ?

1950 ರಲ್ಲಿ ಆರ್.ಎಸ್.ಎಸ್. ಮೇಲೆ ಪ್ರತಿಬಂಧ ವಿದ್ದಾಗ ಜನ ಸಂಘ ತಲೆ ಎತ್ತಿತು. ಇನ್ನು ಮುಂದೆ ತಾವು ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸುವುದಿಲ್ಲವೆಂದು ಗೃಹ ಶಾಖೆಗೆ ಬರೆದುಕೊಟ್ಟ ನಂತರ ಅವರ ಬಿಡುಗಡೆಯಾಯಿತು. ಆದ್ದರಿಂದ ಆರ್.ಎಸ್. ಎಸ್.ಗೆ ಒಂದು ಬಹಿರಂಗ ರಾಜಕೀಯ ಪಕ್ಷದ ಅವಶ್ಯಕತೆಯಿತ್ತು. 1950 ರಿಂದ 1977 ರವರೆಗೆ ರಾಜಕೀಯ ಪಕ್ಷವಾಗಿದ್ದ ಜನ ಸಂಘದ ಹುಟ್ಟಿಗೆ ಅದೇ ಕಾರಣ. 1977 ರ ಚುನಾವಣೆಯ ಸಮಯದಲ್ಲಿ ಅದು ಜನತಾ ಪಾರ್ಟಿಯಲ್ಲಿ ವಿಲೀನ ಗೊಂಡಿತು. ಜನತಾ ಪಾರ್ಟಿ ಮತ್ತು ಆರ್.ಎಸ್. ಎಸ್.ನಲ್ಲಿ ದ್ವಿಸದಸ್ಯತ್ವದ ಪ್ರಶ್ನೆ ಬಂದಾಗ ಜನತಾ ಪಕ್ಷ ಒಡೆದು ಹಳೇ ಜನ ಸಂಘ ಬಿ.ಜೆ.ಪಿ. ಆಯಿತು.

ಆದ್ದರಿಂದ ಕಾಂಗ್ರೆಸ್ ವಿರುದ್ಧ ಆರ್.ಎಸ್ ಎಸ್. ಮುಖಂಡನ ಒಂದೇ ಒಂದು ತಕರಾರು "ಅಲ್ಪ ಮತಸ್ಥರಿಗೆ ರಿಯಾಯಿತಿ" ತೋರಿಸುತ್ತಿರುವುದಾಗಿದೆ. ಅದ್ವಾನಿಯವರು ಎಷ್ಟು ಚಾಣಾಕ್ಷತನದಿಂದ ವಾದಿಸಿದರೂ ಕೂಡ, ಅವರ ಪಕ್ಷ ಹಿಂದಿನ ಜನಸಂಘದಂತೆಯೇ ಆರ್.ಎಸ್.ಎಸ್.ನ ಹಿಡಿತದಲ್ಲಿದೆಂಬುದನ್ನು ನಿರಾಕರಿಸಲು ಸಾಧ್ಯವಿಲ್ಲ.

ಮತ್ತೊಂದು ಪ್ರಶ್ನೆಯಾವುದೆಂದರೆ; ಮೂರು ರಾಜ್ಯಗಳಲ್ಲಿ ಬಲಿಷ್ಟವಾದ ಏಕೈಕ ರಾಜಕೀಯ ಪಕ್ಷವೆಂದು ಬಿ.ಜೆ.ಪಿ.ಒಪ್ಪಿಕೊಂಡಿರುವ "ವಿದೇಶಿ ಏಜನ್ಸಿ" ಕಮ್ಯುನಿಸ್ಟ್ ಪಕ್ಷಕ್ಕೆ ಪ್ರತಿಯಾಗಿ ಬಿ.ಜೆ.ಪಿ. ಅಥವಾ ಹಿಂದಿನ ಜನಸಂಘ ಒಂದೇ ಒಂದು ರಾಜ್ಯದಲ್ಲಿ ಕೂಡ ಏಕೈಕ ಬಲಿಷ್ಟ ರಾಜಕೀಯ ಪಕ್ಷವಾಗಿಲ್ಲ ಯಾಕೆ? ತಾನು ಮುಖಂಡತ್ವದಲ್ಲಿಲ್ಲದಿದ್ದರೂ, ಸಕ್ರಿಯ ಭಾಗಿದಾರನಾಗಿರುವ, ಎಡ ಪಕ್ಷಗಳು ಸ್ವಯಂ ಸ್ಫೂರ್ತಿಯಿಂದ ಒಪ್ಪಿಕೊಳ್ಳುವ ಸಂಗಾತಿಗಳಾಗಲು ಮಾತ್ರ ಸಾಧ್ಯವೆಂಬ ರೀತಿಯಲ್ಲಿ ಸಂಯುಕ್ತ ರಂಗರಚಿಸಲು ಪ್ರಯತ್ನ ನಡೆಸಿದ್ದುದೇಕೆ ? ಅಂಥ ಪ್ರಯತ್ನ ವಿಫಲಗೊಂಡಾಗ ಕೇರಳದ ಮಾದರಿಯಲ್ಲಿ ಕಾಂಗ್ರೆಸ್ಸಿನೊಡನೆ ಒಪ್ಪಂದ ಸಾಧಿಸುವಂತೆ ಮಾರ್ಗ ದರ್ಶನ ನೀಡಿದ್ದಾರೆ ಅವರ ಗುರು.

ಕಮ್ಯುನಿಸ್ಟ್ ಪಕ್ಷದ ಹುಟ್ಟು

ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಜನಿಸಿದ ಕಮ್ಯುನಿಸ್ಟರು, ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ತಮ್ಮ ಸ್ವಂತ ಅನುಭವದ ಆಧಾರದಿಂದ ಸ್ವತಂತ್ರ ಶಕ್ತಿಯಾಗಿ ಮೂಡಿ ಬಂದರು. ಅವರು ಸಹಜವಾಗಿಯೇ ಸೋಶಲಿಸ್ಟ್ ಸೋವಿಯತ್ ಯೂನಿಯನಿನ ಹುಟ್ಟಿನಿಂದ, ಅದರ ಆಂತರಿಕ ಬೆಳವಣಿಗೆಯ ಮಹಾ ಕಾರ್ಯದಿಂದ ಜಗತ್ತಿನಾದ್ಯಂತ ನಡೆದಿದ್ದ ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿಗೆ ಅವರ ಬೆಂಬಲ ಸಹಾನುಭೂತಿಯಿಂದ ಸ್ಫೂರ್ತಿಗೊಂಡಿದ್ದರು. ತಮ್ಮ ದೇಶದಲ್ಲಿಯೇ ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿಯ ಪರಂಪರೆಯನ್ನು ಮುಂದುವರಿಸುತ್ತಾ ಜಗತ್ತಿನ ಕಮ್ಯುನಿಸ್ಟ್ ಚಳುವಳಿಯ ಅನುಭವಗಳನ್ನು ಅರಗಿಸಿಕೊಳ್ಳುತ್ತಾ, ಕಾರ್ಮಿಕ ವರ್ಗದ ರೈತರ, ಕೃಷಿ ಕಾರ್ಮಿಕರ, ಮಧ್ಯಮ ವರ್ಗದವರ, ಬುದ್ಧಿ ಜೀವಿಗಳ, ವಿದ್ಯಾರ್ಥಿ ಯುವಜನರ ಮತ್ತು ಮಹಿಳೆಯರ ಸಂಘಟನೆ ಕಟ್ಟಿ ಚಳುವಳಿ ನಡೆಸುವುದರಲ್ಲಿ ಮಗ್ನರಾದರು, ಅವೊಂದು ರಾಜಕೀಯ ಶಕ್ತಿಯಾಗಿ ಬೆಳೆದು ಬಂದು, ಬಂಡವಾಳಶಾಹಿ-ಭೂಮಾಲಕ ವರ್ಗದ ಅಧಿಕಾರವನ್ನು ಎದುರಿಸಲಿಕ್ಕೆ ಬೇಕಾದ ಬಲಹೊಂದುವಂತೆ ಪ್ರಯತ್ನಿಸಿದರು.

ಅಂಥ ದುಡಿತದಿಂದಾಗಿಯೇ 1952 ರಷ್ಟು ಹಿಂದೆಯೇ, ಕಮ್ಯುನಿಸ್ಟ್ ಪಕ್ಷ ಲೋಕಸಭೆಯಲ್ಲಿ ಮತ್ತು 3 ರಾಜ್ಯಗಳಲ್ಲಿ ಪ್ರಧಾನ ವಿರೋಧ ಪಕ್ಷವಾಗಿ, ಅನಂತರ 1957 ರಲ್ಲಿ ಪ್ರಥಮ ಕಮ್ಯುನಿಸ್ಟ್ ಸರಕಾರವನ್ನು ಸ್ಥಾಪಿಸಿ, 1967 ರಲ್ಲಿ 2 ಸಂಯುಕ್ತ ಸರಕಾರಗಳಿಗೆ ಮುಖಂಡತ್ವ ನೀಡಿ, 1977–78 ರಲ್ಲಿ ಎರಡು ಸರಕಾರಗಳನ್ನೂ, ಇಂದು ಮೂರು ರಾಜ್ಯ ಸರಕಾರಗಳನ್ನೂ ಸ್ಥಾಪಿಸಲು ಸಾಧ್ಯವಾಗಿದೆ.

ಕಾಂಗ್ರೆಸ್ ಸರಕಾರಗಳು ಆರ್ಥಿಕ ಯೋಜನೆಗಳನ್ನು ಪ್ರಾರಂಭಿಸಿದಾಗ, ಅಂಥ ಸರಕಾರಗಳು ಅನುಸರಿಸುತ್ತಿದ್ದ ನೀತಿಗಳಿಗೆ ಬದಲಿ ನೀತಿಯನ್ನು ಪ್ರಕಟಿಸುತ್ತ ಬಂದಿದ್ದಾರೆ ಕಮ್ಯುನಿಸ್ಟರು.

ವಿದೇಶೀ ಧೋರಣೆಯ ಕುರಿತು ಕೂಡ ಸ್ವತಂತ್ರ ನೀತಿಯನ್ನು, ಅನುಸರಿಸುವ ಶಕ್ತಿಯನ್ನು ತೋರಿಸಿದ್ದಾರೆ. ಸಾಮ್ರಾಜ್ಯಶಾಹಿ ವಿರೋಧಿ ನಿಲುವೆಯನ್ನು ಸರಕಾರ ಅನುಸರಿಸಿದಾಗ ಅದಕ್ಕೆ ಬೆಂಬಲ ಕೊಡುವ, ಸಾಮ್ರಾಜ್ಯಶಾಹಿ ಶಕ್ತಿಗಳೊಡನೆ ಒಪ್ಪಂದ ಮಾಡಿಕೊಳ್ಳುವ ನೀತಿಯನ್ನನುಸರಿಸಿದಾಗ ಅದನ್ನು ವಿರೋಧಿಸುವ ಪಾತ್ರ ವಹಿಸಿದ್ದಾರೆ.

ಕೇಂದ್ರ-ರಾಜ್ಯ ಸಂಬಂಧ, ಜಾತೀಯ ಮತೀಯ ಶಕ್ತಿಗಳಿಂದ ಮತ್ತು ಛಿದ್ರಕಾರಿಗಳಿಂದ ದೇಶದ ಐಕ್ಯತೆಗೆ ಉಂಟಾಗುತ್ತಿರುವ ಗಂಡಾಂತರ, ಹಳೇ ಸಂಪ್ರದಾಯ ಬಿಟ್ಟು, ಸಾಮಾಜಿಕ–ಸಾಂಸ್ಕೃತಿಕ ಸುಧಾರಣೆಗಾಗಿ ನಡೆಯುತ್ತಿರುವ ಹೋರಾಟಗಳೆಲ್ಲಸ್ವಾತಂತ್ರ್ಯನಂತರದ ಕಾಲದಲ್ಲಿ ಗಂಭೀರ ಪ್ರಶ್ನೆಗಳಾಗಿ ಎದ್ದು ಬಂದಿವೆ. ಈ ಎಲ್ಲಾ ಪ್ರಶ್ನೆಗಳ ಕುರಿತು ಕಮ್ಯುನಿಸ್ಟರು ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿಗಿಂತಲೂ ಪೂರ್ವದ ಆಧುನೀಕರಣ ಚಳುವಳಿಯ ಪರಂಪರೆಯನ್ನು ಮುಂದುವರಿಸುತ್ತ ಬಂದಿದ್ದಾರೆ.

ಕಮ್ಯುನಿಸ್ಟರು ಎಲ್ಲಾ ಪ್ರಜಾಪ್ರಭುತ್ವವನ್ನೂ, ಜಾತ್ಯಾತೀತತೆಯನ್ನೂ ವೈಜ್ಞಾನಿಕತೆಯನ್ನೂ ಆಧುನೀಕತೆಯನ್ನು ನಿರಂತರ ಎತ್ತಿ ಹಿಡಿಯುತ್ತ ಬಂದಿದ್ದಾರೆ. ಸಂಪ್ರದಾಯತ್ವದ ಜೊತೆಯಲ್ಲಿ ಮೂಲಭೂತವಾಗಿ ಎಂದೂ ಒಪ್ಪಂದ ಮಾಡಿಕೊಂಡಿಲ್ಲ.

ಹಿನ್ನೋಟದ ಶಕ್ತಿಗಳು

ಈ ಧೋರಣೆಗೆ ವಿರುದ್ಧವಾಗಿ ಒಂದೆಡೆ ಹಿಂದೂ ಪುನರುತ್ಥಾನ ವಾದಿಗಳನ್ನೂ ಹಾಗೇ ಮುಸ್ಲಿಂ, ಕ್ರಿಶ್ಚನ್, ಸಿಖ್ ಮತ್ತು ಇತರ ಜಾತಿಗಳಲ್ಲಿ ಅವರ ವಿರೋಧಿಗಳನ್ನೂ ಕಾಣಬಹುದಾಗಿದೆ. ಒಂದು ಕಡೆ ಆರ್. ಎಸ್. ಎಸ್., ಬಿ. ಜೆ. ಪಿ, ವಿಶ್ವ ಹಿಂದೂ ಪರಿಷತ್ ಮುಂತಾದವುಗಳು, ಮುಸ್ಲಿಂಲೀಗ್, ಜಮಾಯತೇ ಇಸ್ಲಾಮ್, ಕ್ರಿಶ್ಚನ್, ಸಿಖ್ ಮೊದಲಾದವೆಲ್ಲ 20 ನೇ ಶತಮಾನದ ಭಾರತವನ್ನು ಮಧ್ಯ ಯುಗದತ್ತ ಕೊಂಡೊಯ್ಯುವ ಪ್ರಯತ್ನದಲ್ಲಿದ್ದಾರೆ. ಆರ್.ಎಸ್.ಎಸ್., ಬಿ ಜೆ.ಪಿ., ವಿಶ್ವಹಿಂದೂ ಪರಿಷತ್‌ಗಳೆಲ್ಲ, 'ಭಾರತ'

(5ನೇ ಪುಟ ನೋಡಿ)

(2ನೇ ಪುಟದಿಂದ)
ಕ್ಷಿಸಿದ ದರಕ್ಕಿಂತ ಹೆಚ್ಚು ಅಭಿವೃದ್ಧಿ ತೋರಿಸಿದರೂ, ಪ್ರಮುಖ ಗ್ರಾಹಕ ವಸ್ತುಗಳಾದ ಬಟ್ಟೆ, ರಸಗೊಬ್ಬರ, ಮೋಟಾರು ವಾಹನಗಳು, ಇಂಜಿನಿಯರಿಂಗ್ ಸಾಮಗ್ರಿಗಳು ಇತ್ಯಾದಿಗಳ ಬೇಡಿಕೆಗಳು ಗಣನೀಯವಾಗಿ ಕಡಿಮೆಯಾಗಿವೆ ಕೃಷಿ ಉತ್ಪಾದನೆಯ ಕುಸಿತವು ಕೈಗಾರಿಕೋತ್ಪಾದನೆಯನ್ನು ಇಳಿವಮುಖಗೊಳಿಸಲಿದೆ. ರಿಸರ್ವ್ ಬ್ಯಾಂಕಿನ ಇತ್ತೀಚಿಗಿನ ಸಮೀಕ್ಷೆಯಂತೆ, 1987–88ರಲ್ಲಿ ಒಟ್ಟು ಆರ್ಥಿಕ ಅಭಿವೃದ್ಧಿಯ ದರವು ಶೇ.1.5ರಷ್ಟೇ ಆಗಬಹುದೆಂದೂ ಅದು 'ಹಿಂದೂ' ಅಭಿವೃದ್ಧಿ ದರ: ಶೇ3.5" ಕ್ಕಿಂತಲೂ ಕಡಿಮೆ ಎಂದೂ ಅಭಿಪ್ರಾಯ ಪಡಲಾಗಿದೆ. ಜಾಗತಿಕ ಬ್ಯಾಂಕಿನ ಒಂದು ಸಮೀಕ್ಷೆಯಂತೆ ಈ ವರ್ಷ ಭಾರತದ ಆರ್ಥಿಕ ಅಭಿವೃದ್ಧಿಯ ದರವು 'ಸೊನ್ನೆ' ಎಂದು ಅಂದಾಜು ಮಾಡಲಾಗಿದೆ! ಅಂದರೆ- ಈ ಮೂರು ವರ್ಷಗಳಲ್ಲಿ ಭಾರತದ ಆರ್ಥಿಕ ಅಭಿವೃದ್ಧಿ ಹೆಚ್ಚು ಕಡಿಮೆ ಸ್ಥಗಿತಗೊಂಡಿದೆ. ಉತ್ಪಾದನೆ ಹೆಚ್ಚಿದುದಕ್ಕೆ ಮಾರುಕಟ್ಟೆ ಇಲ್ಲವಾಗಿದೆ. ಹಣದುಬ್ಬರ, ಬಡತನ ದಾರಿದ್ರ್ಯಗಳಿಂದಾಗಿ.

ದೇಶದಲ್ಲಿ 1,30,606 ಕೈಗಾರಿಕಾ ಸಂಸ್ಥೆಗಳು ರೋಗಗ್ರಸ್ಥವಾಗಿವೆ 1980ರಲ್ಲಿ ರೋಗಗ್ರಸ್ಥಸಂಸ್ಥೆಗಳ ಸಂಖ್ಯೆ 24,500 ಅಷ್ಟೇ ಆಗಿತ್ತು. 1984 (ಮಾರ್ಚ್)ರಲ್ಲಿಉದ್ಯೋಗವಿನಿಮಯ ಸಂಸ್ಥೆಗಳಲ್ಲಿ ದಾಖಲಾದ ನಿರುದ್ಯೋಗಸ್ಥರ ಸಂಖ್ಯೆ 2.26 ಕೋಟಿ, 1987 (ಮಾರ್ಚ್)ನಲ್ಲಿ ಈ ನಿರುದ್ಯೋಗಸ್ಥರ ಸಂಖ್ಯೆಯು 3.05 ಕೋಟಿಗೇರಿತು. ಹಾಗೆಯೇ ಬಡತನ ರೇಖೆಯ ಕೆಳಮಟ್ಟದಲ್ಲಿರುವ ಜನ ಸಂಖ್ಯೆಯ ಶೇಕಡಾಂಶವೂ ಹೆಚ್ಚಿದೆ.

ಜಾಗತಿಕ ಬ್ಯಾಂಕಿನ ಅಪಾಯಕಾರಿ ಸಲಹೆಗಳು

ಸರಕಾರದ ಸಂಪನ್ಮೂಲಗಳ ಕೊರತೆಯನ್ನು ಹೋಗಲಾಡಿಸಲು ಜಾಗತಿಕ ಬ್ಯಾಂಕಿನ ಕೆಲವು ಅಪಾಯಕಾರಿರಹಸ್ಯ ಸಲಹೆಗಳು ಇತ್ತೀಚೆಗೆ ಬೆಳಕಿಗೆ ಬಂದಿದೆ ಮುಖ್ಯವಾಗಿ (1) ರೂಪಾಯಿಯ ಅಂತರರಾಷ್ಟ್ರೀಯ ವಿನಿಮಯದ ದರದ ಅಪ ಮೌಲ್ಯ ಮಾಡಿ ರಫ್ತು ಹೆಚ್ಚಿಸುವುದು (2) ರಫ್ತು -ಉತ್ಪಾದನೆ ಹೆಚ್ಚಿಸಲು ಬೇಕಾದ ಯಂತ್ರೋಪಕರಣಗಳ ತಾಂತ್ರಿಕತೆಯ ಆಮದು ಇನ್ನಷ್ಟು ಸುಲಭಗೊಳಿಸುವುದು (3) ಸಾರ್ವಜನಿಕ ವೆಚ್ಚ ಕಡಿಮೆ ಮಾಡುವುದು- ಉಕ್ಕು, ವಿದ್ಯುತ್, ವಿಮಾನಸಾರಿಗೆ, ಇತ್ಯಾದಿ ಬೃಹತ್ ಉದ್ಯಮಗಳನ್ನು ಒಂದೊಂದಾಗಿ ಖಾಸಗೀ ರಂಗಕ್ಕೆ ಬಿಟ್ಟು ಕೊಡುವುದು ; ಗೊಬ್ಬರ, ಆಹಾರಧಾನ್ಯ ಇತ್ಯಾದಿ ಆವಶ್ಯ ವಸ್ತುಗಳ ಮೇಲಿನ ಸಹಾಯಧನ ರದ್ದುಗೊಳಿಸುವುದು ; ಸರಕಾರಿ ಹಾಗೂ ಸಾರ್ವಜನಿಕ ಕ್ಷೇತ್ರದ ನೌಕರರ ಕಾರ್ಮಿಕರ ನೇಮಕಾತಿ ಕಡಿತ ಗೊಳಿಸುವುದು, ಪುನಃ ಕಡ್ಡಾಯ ಠೇವಣಿ, ವೇತನ– ತುಟ್ಟಿ ಭತ್ತೆ ಹೆಚ್ಚಳವನ್ನು ತಡೆ ಹಿಡಿಯುವುದು....

ಮೇಲಿನ ಎಲ್ಲಾ ಸಲಹೆಗಳೂ ದೇಶದ ಅಳಿದುಳಿದ ಯೋಜನಾ ಬದ್ಧ ಆರ್ಥಿಕ ಅಭಿವೃದ್ಧಿ ಮಾರ್ಗವನ್ನು ಕೈ ಬಿಡಲು ಆಂತರಿಕ ಮಾರುಕಟ್ಟೆ ಉತ್ಪಾದನೆ- ಉದ್ಯೋಗಗಳನ್ನು ಅಲಕ್ಷಿಸಿ ವಿದೇಶಿ ಮಾರುಕಟ್ಟೆಯನ್ನೇ ಅವಲಂಭಿಸಲು, ಗುತ್ತೇದಾರಿ ಕೈಗಾರಿಕಾ ಸಂಸ್ಥೆಗಳಿಗೆ ಹಾಗೂ ವಿದೇಶಿ ಬಹು ರಾಷ್ಟ್ರೀಯ ಸಂಸ್ಥೆಗಳಿಗೆ ಭಾರತದಲ್ಲಿ ಸ್ವೇಚ್ಛೆಯಾಗಿ ಲಾಭಗಳಿಸಲು, ರೈತರ-ಕಾರ್ಮಿಕರ- ನೌಕರರ-ಜನ ಸಾಮಾನ್ಯರ ಜೀವನ ಮಟ್ಟವನ್ನು ಇನ್ನಷ್ಟು ಹದಗೆಡಿಸಲು ದೇಶದ ಸ್ವಾತಂತ್ರ್ಯ-ಸ್ವಾವಲಂಬನೆ ಅಸ್ಥಿರಗೊಳಿಸಲುಉದ್ದೇಶವುಳ್ಳವುಗಳಾಗಿವೆ. ಆದರೆ, ರಾಜೀವಗಾಂಧಿಯ ಅದಕ್ಷ ಸರಕಾರ ಬಂಡವಾಳಶಾಹಿ ದೇಶಗಳ ಹಿತಾಸಕ್ತಿಗಳನ್ನೇ ಪ್ರತಿಪಾದಿಸುತ್ತಿರುವ ಜಾಗತಿಕ ಬ್ಯಾಂಕಿನ ಈ ದಿವಾಳಿಕೋರ ಸಲಹೆಗಳನ್ನು ಮುಂದಿನ ಮುಂಗಡ ಪತ್ರ ಪ್ರಕಟಿಸುವ ಸಮಯದಲ್ಲಿ ಸ್ವೀಕರಿಸಲು ಹೇಸಲಾರದು.

ರಾಜೀವಗಾಂಧಿ ರಾಜಿನಾಮೆ ಕೊಡಲಿ

ರಾಜೀವಗಾಂಧಿಯ ಕಳೆದ ಮೂರು ವರ್ಷಗಳ ಆಳ್ವಿಕೆಯಿಂದ ದೇಶದಲ್ಲಿ ಹಿಂದೆಂದೂ ಕಾಣದ ತೀವ್ರ ಆರ್ಥಿಕ ದುಃಸ್ಥಿತಿ, ರಾಜಕೀಯ ಅಸ್ಥಿರತೆ, ಸಾಮಾಜಿಕ ಕ್ಷೋಭೆ ಉಂಟಾಗಿದೆ. ಉನ್ನತ ವಲಯಗಳಲ್ಲಿ ಸಾವಿರಾರು ಕೋಟಿ ಮೌಲ್ಯದ ಭ್ರಷ್ಟಾಚಾರಗಳು. 70000 ಕೋಟಿ ರೂಪಾಯಿಗಳಷ್ಟು ಕಪ್ಪು ಹಣದ ಚಲಾವಣೆ, ಬೃಹತ್ ಪ್ರಮಾಣದಲ್ಲಿ ವಿದೇಶಿ ಬ್ಯಾಂಕು ಖಾತೆಗಳಲ್ಲಿ ಕಪ್ಪು ಹಣದ ಗುಪ್ತ ಠೇವಣಿ, ರಾಜೀವಗಾಂಧಿ ಹಾಗೂ ಅವರ ಮಂತ್ರಿ ಮಾಗಧರ ಐಶರಾಮ್ಯ ಜೀವನ ವೈಖರಿ ಕಾಂಗ್ರೆಸೇತರ ರಾಜ್ಯ ಸರಕಾರಗಳ ವಿಷಯದಲ್ಲಿ ಅಸಹನೆ ಹಾಗೂ ಅಸಹಕಾರ ಮತ್ತು ಅವುಗಳನ್ನು ಪದಚ್ಯುತಗೊಳಿಸುವುದಾಗಿ ಸದಾ ಬೆದರಿಕೆ ಹಾಕುವುದು, ಪಿತೂರಿ ನಡೆಸುವುದು-ಇತ್ಯಾದಿಗಳಿಂದ ಜನರು ರೊಚ್ಚಿಗೆದ್ದಿದ್ದಾರೆ. ರಾಜೀವ ಗಾಂಧಿ ಸರಕಾರ ರಾಜಿನಾಮೆ ಕೊಡಲಿ, ಸಂಸತ್ತಿಗೆ ನಡುಗಾಲದ ಮರು ಚುನಾವಣೆ ನಡೆಯಲಿ ಎಂದು ದೇಶಾದ್ಯಂತ ಜನ ಕೋಟಿ, ಶ್ರಮಿಕ ವರ್ಗ ಒತ್ತಾಯಿಸುತ್ತಿದೆ, ಹೋರಾಟ ಹರಿತಗೊಳಿಸುತ್ತಿದೆ.

ಈ ಸಂದರ್ಭ,ನವಂಬರ್ ಡಿ 1987 ರಂದು ದೇಶಾದ್ಯಂತ ನಾಲ್ಕು ಎಡ ಪಕ್ಷಗಳ ನೇತೃತ್ವದಲ್ಲಿರುವ 24 ಸಾಮೂಹಿಕ ಸಂಘಟನೆಗಳು ಒಳಗೊಂಡ ಕಾರ್ಮಿಕ-ರೈತ ಜಾಥಾ ಹಾಗೂ ನವದೆಹಲಿಯಲ್ಲಿ ದಿ|| 9–12–87 ರಂದು ಹತ್ತು ಲಕ್ಷ ಜನರ ಮತ ಪ್ರದರ್ಶನ, ಮುಂದೆ 'ಭಾರತ ಬಂದ್'ಗೆ ಕರೆ, 17 ಅಂಶಗಳ ಪರ್ಯಾಯ ಆರ್ಥಿಕಕಾರ್ಯಕ್ರಮಗಳ ಜೊತೆಗೆ ರಾಜೀವಗಾಂಧಿ ರಾಜಿನಾಮೆ ಕೊಡುವಂತೆ ನಡೆಸಿದ ಅತ್ಯಪೂರ್ವ ಜನಾಂದೋಳನ ಭಾರತದ ಇತಿಹಾಸದಲ್ಲಿಯೇ ಮಹತ್ವ ಪೂರ್ಣವಾಗಿದೆ. ದೇಶದ ಸ್ವಾತಂತ್ರ್ಯ, ಸ್ವಾವಲಂಬನೆ, ಐಕ್ಯತೆ ರಕ್ಷಿಸುವಲ್ಲಿ ಮುಂದಿನ ದಿನಗಳಲ್ಲಿ ಇಂತಹ ಜನಾಂದೋಳನ ಪ್ರಬಲ ಪಾತ್ರ ವಹಿಸಲಿದೆ.

1987 ತೀವ್ರ ಆರ್ಥಿಕ ದುಃಸ್ಥಿತಿ

★ ಏಳನೇ ಯೋಜನೆಗೆ ಸಂಪನ್ಮೂಲಗಳ ತೀವ್ರ ಕೊರತೆ.
★ ಭಾರತ ಆಂತರಿಕ ಹಾಗೂ ವಿದೇಶಿ ಸಾಲಗಳ ಬಲೆಯ ಅಪಾಯದ ಅಂಚಿನಲ್ಲಿ.
★ ಮುಂಗಡ ಪತ್ರದ ಮುನ್ನ ಪುನಃ ಸಾರ್ವಜನಿಕ ಕ್ಷೇತ್ರದಲ್ಲಿ ಉಕ್ಕು, ಕಲ್ಲಿದ್ದಲು, ಅಡಿಗೆ ತೈಲ, ಅವಿ ಸಕ್ಕರೆ, ಪೆಟ್ರೋಲಿಯಂ ಇತ್ಯಾದಿಗಳ ಬೆಲೆಗಳ ವಿಪರೀತವಾರಿಕೆ.
★ ಜನ ಕೋಟಿ ಅಪ್ರತ್ಯಕ್ಷ ತೆರಿಗೆಯ ಭಾರದಿಂದ ತತ್ತರಿಸುತ್ತಿದೆ.
★ ಕೊರತೆ ಹಣ ಸೃಷ್ಟಿ 1987-88ರಲ್ಲಿ ರೂ.10,000 ಕೋಟಿರೂ ಮೀರಲಿದೆ.
★ ದೇಶದ 50 ಪ್ರಮುಖ ಕೇಂದ್ರಗಳ ಪೈಕಿ, 17ಕೇಂದ್ರಗಳಲ್ಲಿ ಎರಡಂಕೆಯ ಹಣ ದುಬ್ಬರ : ಶೇ. 10.0 ರಿಂದ ಶೇ. 17.5 ರ ದರದಲ್ಲಿ.
★ ಬರಗಾಲದಿಂದ ಕೃಷಿ ಉತ್ಪಾದನೆಯಲ್ಲಿ 10–15 ಮಿಲಿಯ ಟನ್ ಇಳಿ ಮುಖ.
★ ಕೈಗಾರಿಕಾ ರಂಗದಲ್ಲಿ ರಸಗೊಬ್ಬರ, ಹತ್ತಿಬಟ್ಟೆ, ಮೋಟಾರು ವಾಹನ, ಇಂಜಿನಿಯರಿಂಗ್ ಸಾಮಗ್ರಿ–ಇತ್ಯಾದಿಗಳಿಗೆ ಆಂತರಿಕ ಮಾರುಕಟ್ಟೆಯ ಅಭಾವ.
★ 1987–88 ರಲ್ಲಿ ಒಟ್ಟು ಆರ್ಥಿಕ ಅಭಿವೃದ್ಧಿ ದರ 'ಸೊನ್ನೆ'
★ ಜಾಗತಿಕ ಬ್ಯಾಂಕಿನ ರಹಸ್ಯ ಸಲಹೆಗಳು :
ರೂಪಾಯಿಯ ಅಪ ಮೌಲ್ಯ. ರಫ್ತು ಹೆಚ್ಚಳ.
ರಫ್ತು ಹೆಚ್ಚಳಕ್ಕೆ ಇನ್ನಷ್ಟು ಸಡಿಲು ಆಮದು ನೀತಿ.
ಸಾರ್ವಜನಿಕ ವೆಚ್ಚ ಕಡಿತ–ಭಾರೀ ಉದ್ಯಮಗಳನ್ನು ಖಾಸಗೀ ರಂಗಕ್ಕೆ ಬಿಟ್ಟು ಕೊಡುವುದು.
ಸಹಾಯ ಧನ ರದ್ಧತಿ.
ನೌಕರರ–ಕಾರ್ಮಿಕರ ನೇಮಕಾತಿ ಕಡಿತ, ಕಡ್ಡಾಯ ಠೇವಣಿ. ವೇತನ–ತುಟ್ಟಿಭತ್ತೆ ಏರಿಕೆಯನ್ನು ತಡೆ ಹಿಡಿಯುವುದು.
★ ರಾಜೀವ ಗಾಂಧಿ ಸರಕಾರ ರಾಜೀನಾಮೆ ಒತ್ತಾಯಿಸಿ,ಪರ್ಯಾಯ ಆರ್ಥಿಕ ಕಾರ್ಯಕ್ರಮಗಳಿಗಾಗಿ ಬೃಹತ್ ಜನಾಂದೋಳನ.

(4ನೇ ಪುಟದಿಂದ)
ಹಿಂದೂಗಳ ಮಾತೃಭೂಮಿ ಎಂದೂ ಇತರರೆಲ್ಲ ವಿದೇಶೀಯರೆಂದು ಪರಿಗಣಿಸಬೇಕೆಂದೂ ಬಹಿರಂಗವಾಗಿಯೇ ಬೋಧಿಸುತ್ತಿದ್ದಾರೆ. ಭಾರತದ ರಾಷ್ಟ್ರೀಯತೆ ಹಿಂದೂ, ಮುಸ್ಲಿಂ, ಕ್ರಿಶ್ಚನ್, ಸಿಖ್ ಪಾರ್ಸಿ ಮೊದಲಾದವರೆಲ್ಲ,ಭಾರತದ ಸರಿಸಮಾನ ನಾಗರೀಕರೆಂದು ಪರಿಗಣಿಸುತ್ತಿರುವಾಗ, ಅದನ್ನು ಅಲ್ಲಗಳೆಯುವುದೇ ಜಾತಿವಾದಿಗಳ ಉದ್ದೇಶವಾಗಿದೆ.

● ಗಾಂಧಿಯ ಕೊಲೆ

ಧರ್ಮ ಅಥವಾ ಮತ್ತಾವುದೇ ಭೇದವಿಲ್ಲದೆ ಎಲ್ಲರೂ ಭಾರತದ ನಾಗರೀಕರೆಂಬುದನ್ನು ಕಲಿಸಿಕೊಟ್ಟ ಮಹಾತ್ಮಾಗಾಂಧಿಯ ಕೊಲೆಯಾಗಿರುವುದು ಒಬ್ಬ ಆರ್.ಎಸ್.ಎಸ್. ವ್ಯಕ್ತಿಯಿಂದ ಆರ್.ಎಸ್. ಎಸ್ ಮತ್ತು ಬಿ.ಜೆ ಪಿ. ಮುಖಂಡರ್ಯಾರೂ ಕೂಡ ಆ ವ್ಯಕ್ತಿಯ ಹಿಂಸಾ ಕೃತ್ಯವನ್ನು ಖಂಡಿಸಿಲ್ಲ. ಆರ್. ಎಸ್. ಎಸ್. ಮತ್ತು ಬಿ. ಜೆ. ಪಿ. ಯ ರಾಜಕಾರಣ ನಾಥೂರಾಂ. ಗೋಡ್ಸೆಯ ಧೋರಣೆಯನ್ನು ಮುಂದುವರಿಸಿಕೊಂಡು ಹೋಗುವುದಾಗಿದೆ.

ನಾವು ಕಮ್ಯುನಿಸ್ಟರು ಮಹಾತ್ಮ ಗಾಂಧಿಯವರನ್ನು ಹಲವಾರು ಸಂಧರ್ಭಗಳಲ್ಲಿ ವಿರೋಧಿಸಿದ್ದೆವು ಹಾಗೆಯೇ ಟೀಕೆ ಮಾಡಿದ್ದೆವು. ಆದರೆನಾವುಸ್ವಾತಂತ್ರ್ಯ ಚಳುವಳಿಯಲ್ಲಿ ಸಾಧಿಸಿದ ಭಾರತದ ಐಕ್ಯತೆಯಅತ್ಯುತ್ತಮಪರಂಪರೆಯನ್ನು ಮುಂದುವರಿಸಿಕೊಂಡು ಹೋಗುತ್ತಿದ್ದೇವೆ ಮಾತ್ರವಲ್ಲ, ದುಡಿಯುವ ಜನತೆಯ ವರ್ಗದ ಐಕ್ಯತೆಯನ್ನು ಬಲಗೊಳಿಸುತ್ತಿದ್ದೇವೆಂಬಅಭಿಮಾನ ನಮಗಿದೆ. ಹಿಂದೂ ಪಂಥ ವಾದಿಗಳ ರಾಜಕೀಯ ಮತ್ತು ಭಾರತ ಜನತೆಯ ಅದರಲ್ಲೂ ದುಡಿಯುವವರ ಐಕ್ಯತೆಯ ರಾಜಕಾರಣಕ್ಕೂ ಇರುವ ಪರಸ್ಪರ ಹೊಂದಲಾರದ ಸಂಘರ್ಷದ ಹೆಗ್ಗುರುತೇ ನಮ್ಮ ವಿರುದ್ಧ ಬಿ ಜೆ.ಪಿ. ಯವರ ಆಕ್ರೋಶದ ಮೂಲ ಕಾರಣವಾಗಿದೆ. ●

ಕೇಂದ್ರ ಸರಕಾರದ ಬೆಲೆ ಏರಿಕೆ ನೀತಿ ಖಂಡನೆ

ಕೇಂದ್ರ ಸರ್ಕಾರವು ಪೆಟ್ರೋಲಿನ ಬೆಲೆಯನ್ನು ಏಕಾಏಕಿಯಾಗಿ ವಿಪರೀತವಾಗಿ ಏರಿಸಿರುವುದನ್ನು ಸಿ.ಐ.ಟಿ.ಯು ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯು ಉಗ್ರವಾಗಿ ಖಂಡಿಸಿದೆ. ಜನವರಿ 12 ರಂದು ಕೆ.ಮೂಸಬ್ಬರವರ ಅಧ್ಯಕ್ಷತೆಯಲ್ಲಿ ಜರಗಿದ ಜಿಲ್ಲಾ ಸಮಿತಿಯ ಸಭೆಯು ಈ ಕುರಿತು ನಿರ್ಣಯವೊಂದನ್ನು ಅಂಗೀಕರಿಸಿದೆ. ಉಕ್ಕು, ಕಲ್ಲಿದ್ದಲು, ಖಾದ್ಯತೈಲ ಮತ್ತು ಸಕ್ಕರೆಯ ಬೆಲೆಗಳನ್ನು ಏರಿಸಿದುದರ ಬೆನ್ನಲ್ಲೇ ಪೆಟ್ರೋಲಿನ ಬೆಲೆಯನ್ನು ವಿಪರೀತವಾಗಿ ಏರಿಸಿದುದರಿಂದಾಗಿ ಎಲ್ಲಾ ವಸ್ತುಗಳ ಬೆಲೆಗಳು ಹಣ ದುಬ್ಬರವೂ ಹೆಚ್ಚಾಗಿ, ಕಾರ್ಮಿಕ ವರ್ಗದ ಮತ್ತು ಜನ ಸಾಮಾನ್ಯರ ಬದುಕು ಇನ್ನಷ್ಟು ದುಸ್ತರವಾಗಲಿದೆ.

ಬಜೆಟ್ ಅಧಿವೇಶನವು ಸಮೀಪಿಸುತ್ತಿರುವಾಗ ಏಕಪಕ್ಷೀಯವಾಗಿ ಸರಕಾರವು ಜನಸಾಮಾನ್ಯರ ಮೇಲೆ ಈ ರೀತಿಯ ಹೊರೆಗಳನ್ನು ಹೇರುತ್ತಿರುವುದು ಪ್ರಜಾಪ್ರಭುತ್ವ ವಿರೋಧಿ ಕೃತ್ಯವಾಗಿದೆ ಮಾತ್ರವಲ್ಲದೆ ಅಗಾಧ ಪ್ರಮಾಣದ ಬಜೆಟ್ ಕೊರತೆಯನ್ನು ಕಡಿಮೆ ಮಾಡಲು ಕೈಗೊಂಡ ಕುಟಿಲ ತಂತ್ರವಾಗಿದೆ. ಈ ಕ್ರಮಗಳಿಂದಾಗಿ ದೇಶದ ಆರ್ಥಿಕ ದುರಾಡಳಿತವು ಪರಾಕಾಷ್ಟೆಗೆ ಏರುವುದು ಎಂದು ಜಿಲ್ಲಾ ಸಮಿತಿಯು ಎಚ್ಚರಿಸಿದೆ.

ಏರಿಸಿದ ಬೆಲೆಗಳನ್ನು ಕೂಡಲೇ ಇಳಿಸಬೇಕೆಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ ಸಭೆಯು ಜಿಲ್ಲೆಯ ಕಾರ್ಮಿಕರೂ ಜನ ಸಾಮಾನ್ಯರೂ ತಮ್ಮ ಮೇಲಾಗುತ್ತಿರುವ ಈ ದಾಳಿಗಳ ವಿರುದ್ಧ ಹೋರಾಟಕ್ಕೆ ಸಿದ್ಧರಾಗಬೇಕೆಂದು ಕರೆ ನೀಡಿ...

ಕೇಂದ್ರ ಸರ್ಕಾರ ಹೊಸ ವರ್ಷದ ಪ್ರಾರಂಭದಲ್ಲೇ ಪಡಿತರಸಕ್ಕರೆ, ಖಾದ್ಯ ತೈಲ, ಜೀವನಾವ್ಯಕ ವಸ್ತುಗಳ ಬೆಲೆ ಏರಿಸಿರುವುದನ್ನು ಬಿಜಾಪುರ ಜಿಲ್ಲಾ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಸಿಮೆಂಟ್ ಕೆಲಸಗಾರರ ಸಂಘ, ಜೀವ ವಿಮಾ ನಿಗಮ ನೌಕರರ ಸಂಘ, ಬ್ಯಾಂಕ್ ನೌಕರರ ಸಂಘ, ಜಿಲ್ಲಾ ಲೇಬರ್ ಯೂನಿಯನ್‌ಗಳುಖಂಡಿಸಿವೆ.

ಜನತೆಯ ಮೇಲೆ ಇನ್ನಷ್ಟು ಭಾರ ಹಾಕಿ ಬಡ ಹಾಗೂ ಮಧ್ಯಮ ವರ್ಗದ ಜನತೆ ಜೀವನವನ್ನೇ ನಡೆಸದಂತೆ ಮಾಡಿರುವ ಕೇಂದ್ರ ಸರಕಾರದ ಜನವಿರೋಧಿ ನೀತಿಯನ್ನು ಪ್ರತಿಭಟಿಸಿ ಹೋರಾಟಕ್ಕೆ ಸನ್ನದ್ಧರಾಗಬೇಕೆಂದು ಸಿ.ಪಿ ಐ.(ಎಂ) ಕಾರ್ಯದರ್ಶಿ ಕಾ|| ಡಿ. ಎಂ. ಖಲಾಸಿ ಎಂ. ಆರ್. ಮಲ್ಲಾಪೂರ, ಎಚ್. ಜಿ. ದಾಸರ, ಯು ಜೇರಿ, ಹಾಗೂ ಐ.ಎ, ಎಸ್. ಪ್ರಸಾದ್ ಜಂಟಿ ಹೇಳಿಕೆಯಲ್ಲಿ ವಿನಂತಿಸಿದ್ದಾರೆ

ಹೂವಿನಹಡಗಲಿ ಸಮುದಾಯ ವಾರ್ಷಿಕ ಸಭೆ

ಸಮುದಾಯ ಸಂಘಟನೆಯಬಳ್ಳಾರಿ ಜಿಲ್ಲೆ ಹೂವಿನ ಹಡಗಲಿ ಘಟಕದ ವಾರ್ಷಿಕ ಮಹಾಸಭೆ ಜನವರಿ 8ರಂದು ಸ್ಥಳೀಯ ಟಿ. ಡಿ. ವಿ. ಶಾಲೆಯಲ್ಲಿ ಜರುಗಿತು. ಪ್ರಧಾನ ಕಾರ್ಯದರ್ಶಿಯವರು ವರದಿ ಮಂಡಿಸಿದರು. ನಂತರ ಹೊಸ ಸಮಿತಿಯನ್ನು ರಚಿಸಲಾಯಿತು ಎಸ್. ಎಂ. ಕೊಟ್ರೇಶ್ (ಅಧ್ಯಕ್ಷ) ಬಸವರಾಜ್ ಓಗಿ (ಉಪಾಧ್ಯಕ್ಷ) ಚಂದ್ರಶೇಖರ ಬೆನ್ನೂರ (ಪ್ರ. ಕಾರ್ಯದರ್ಶಿ), ಶ್ರೀಮತಿ ವೈ. ಶೀಲಮ್ಮ (ಜೊತೆ ಕಾರ್ಯದರ್ಶಿ) ಹೆಚ್. ಎಂ. ಮಲ್ಲಪ್ಪ (ಖಜಾಂಚಿ) ಶ್ರೀ ಹೆಚ್. ಶೇಷಗಿರಿರಾವ್ ಸಂಘಟನಾ ಕಾರ್ಯದರ್ಶಿಯಾಗಿ ಆಯ್ಕೆಗೊಂಡರು.

ಎಸ್. ಎಫ್. ಐ. ಜಿಲ್ಲಾ ಸಮ್ಮೇಳನಗಳು

ತುಮಕೂರು

ತುಮಕೂರು ಜಿಲ್ಲಾ ಎಸ್. ಎಫ್. ಐ. 3 ನೇ ಸಮ್ಮೇಳನ ಜನವರಿ 9 ರಂದು ಪುರಭವನದಲ್ಲಿ ನೆರವೇರಿತು. ವಿವಿಧ ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳನ್ನೊಳಗೊಂಡ ಮೆರವಣಿಗೆ ಪ್ರಮುಖ ಬೀದಿಗಳನ್ನು ಹಾದು ಪುರಭವನ ತಲುಪಿತು. ರೈತ ಮುಖಂಡರಾದ ಹೆಚ್. ಸಿ. ಚಿನ್ನಪ್ಪನವರು ಧ್ವಜಾರೋಹಣ ಮಾಡಿದರು. ಉಪನ್ಯಾಸಕ ಹಾಗೂ ಚಿತ್ರ ನಟ ಲೋಹಿತಾಶ್ವ ಉದ್ಘಾಟಿಸಿದರು. ವಿದ್ಯಾರ್ಥಿಗಳು ವ್ಯಾಸಂಗದ ಜೊತೆಗೆ ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳಲು ಕರೆ ನೀಡಿದರು. ರಾಜ್ಯ ಸಮಿತಿ ಕಾರ್ಯದರ್ಶಿ ಎಸ್. ಆರ್. ಆರಾಧ್ಯ ಸಹ ಕಾರ್ಯದರ್ಶಿ ಕಾ|| ಜಿ. ಸಿ. ಬೈಯಾರೆಡ್ಡಿ ಯವರುಗಳು ಮಾತನಾಡಿ ಸ್ವಾತಂತ್ರ್ಯ ಪೂರ್ವದಿಂದಲೂ ವಿದ್ಯಾರ್ಥಿ ಸಮುದಾಯ ಸಮಸ್ಯೆಗಳ ಕುರಿತ ಸರ್ಕಾರದ ನಿರ್ಲಕ್ಷ್ಯ ಧೋರಣೆಯನ್ನು ವಿವರಿಸಿದರು ಕಾಳಿದಾಸ ಕಿರಿಯ ಕಾಲೇಜು ಪ್ರಾಂಶುಪಾಲರಾದ ಶ್ರೀ. ಕೆ. ಸಿ. ರಾಮಯ್ಯ ಅಧ್ಯಕ್ಷತೆ ವಹಿಸಿದ್ದರು. ಮೊದಲಿಗೆ ಪ್ರಕಾಶ್ ಸ್ವಾಗತಿಸಿ ಉಮೇಶ್ ವಂದನಾರ್ಪಣೆ ಮಾಡಿದರು. ಪ್ರತಿನಿಧಿ ಅಧಿವೇಶನವನ್ನು ಕಾ|| ಎಸ್. ಆರ್. ಆರಾಧ್ಯ ಉದ್ಘಾಟಿಸಿದರು. ವಿವಿಧ ಸಂಘಟನೆಗಳ ನಾಯಕರು ಶುಭಕೋರಿ ಮಾತನಾಡಿದರು. ಪರೀಕ್ಷಾ ಶುಲ್ಕ ಇಳಿಸಬೇಕು, ಡೊನೇಷನ್ ರದ್ಧತಿ, ಹಾಸ್ಟೆಲ್ ಸೌಲಭ್ಯ ಏಕೋಪಾಧ್ಯಾಯ ಶಾಲೆಗೆ ಶಿಕ್ಷಕರ ನೇಮಕ, ಮುಂತಾದ ನಿರ್ಣಯ ಕೈಗೊಳ್ಳಲಾಯಿತು. ಜಿಲ್ಲಾ ಸಮಿತಿಗೆ ಕಾ|| ಬಸವರಾಜು(ಅಧ್ಯಕ್ಷ) ರವಿಶಂಕರ್ ಆನಂದ್(ಉಪಾಧ್ಯಕ್ಷರು) ಬಿ.ಉಮೇಶ್ (ಕಾರ್ಯದರ್ಶಿ) ಸುರೇಂದ್ರ, ಕರಿಯಣ್ಣ (ಸಹಕಾರ್ಯದರ್ಶಿ)ಪ್ರಕಾಶ ಖಜಾಂಚಿಯಾಗಿರುವ 22 ಜನರ ಸಮಿತಿ ಆಯ್ಕೆ ಮಾಡಲಾಯಿತು.

ಕೋಲಾರ

ಜನವರಿ 7,8 ರಂದು ಕೋಲಾರ ಜಿಲ್ಲಾ 6 ನೇ ಸಮ್ಮೇಳನ ಕೋಲಾರದ (ಬಿಂದು ಸಾಳ್ಯಂ ಛತ್ರ) "ರಮೇಶ ಚಂದ್ರ ಕಮೋರಿಯಾ ನಗರ" ದಲ್ಲಿ ಜಿಲ್ಲಾ ಅಧ್ಯಕ್ಷರಾದ ಕಾ|| ಎಂ. ಎಸ್. ಆನಂದ್‌ರವರ ಧ್ವಜಾರೋಹಣದೊಂದಿಗೆ ಆರಂಭಗೊಂಡಿತು. ಹುತಾತ್ಮರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು ಸಾಹಿತ್ಯ ಅಕಾಡೆಮಿ ಸದಸ್ಯರು ಗೌರಿಬಿದನೂರು ಕಾಲೇಜ್ ಉಪನ್ಯಾಸಕರಾದ ರಂಗಾರೆಡ್ಡಿ ಕೋಡಿರಾಂಪುರ ಸಮ್ಮೇಳನ ಉದ್ಘಾಟಿಸಿದರು. ಶಿಕ್ಷಣ ಪದ್ಧತಿ ಬದಲಾಣೆಗಾಗಿ ಹೋರಾಟ ನಡೆಸಲು ಪ್ರಗತಿಪರ ವಿಚಾರ ಧಾರೆಯನ್ನು ವಿದ್ಯಾರ್ಥಿ ಸಮುದಾಯದ ನಡುವೆ ಬೆಳೆಸಲು ಕರೆ ನೀಡಿದರು. ಮುಖ್ಯ ಅತಿಥಿಗಳಾಗಿ ಕಾ| ಜಿ. ವಿ. ಶ್ರೀ ರಾಮರೆಡ್ಡಿ ಹಾಗೂ ಎಸ್. ಆರ್. ಆರಾಧ್ಯ ಮಾತನಾಡಿದರು.

ಜಿಲ್ಲಾ ಕಾರ್ಯದರ್ಶಿ ಮಂಡಿಸಿದ ವರದಿ ಮೇಲೆ16 ಪ್ರತಿನಿಧಿಗಳು ಚರ್ಚೆ ಮಾಡಿದರು. ಪರೀಕ್ಷಾ ಶುಲ್ಕ ಏರಿಕೆ ವಿರುದ್ಧ, ಕೋಮು ಗಲಭೆ ಖಂಡಿಸಿ, ರಾಜೀವ್‌ಗಾಂಧಿ ರಾಜೀನಾಮೆ ಒತ್ತಾಯಿಸುವ ಮುಂತಾದ ನಿರ್ಣಯ ಕೈಗೊಳ್ಳಲಾಯಿತು. ನೂತನ ಜಿಲ್ಲಾ ಸಮಿತಿಗೆ ಕಾ| ನಾರಾಯಣ ಸ್ವಾಮಿ (ಅಧ್ಯಕ್ಷ) ಬಿ. ಜಯರಾಮ (ಉಪಾಧ್ಯಕ್ಷ) ವಿ. ಲಕ್ಷ್ಮೀ ನಾರಾಯಣ [ಕಾರ್ಯದರ್ಶಿ]ನಂಜೇಗೌಡ[ಖಜಾಂಚಿ ಹಾಗೂ 5 ಮಂದಿ ಸದಸ್ಯರನ್ನೊಳಗೊಂಡ ಸಮಿತಿ ಆಯ್ಕೆಗೊಂಡಿತು.

ಬಿಜಾಪುರ

ಬಿಜಾಪುರ ಜಿಲ್ಲೆಯ ಭಾರತ ವಿದ್ಯಾರ್ಥಿ ಫೆಡರೇಶನಿನ 4 ನೇ ಸಮಾವೇಶ ಡಿ. 8 ರಂದು ಎಸ್. ಎಂ. ಮಿರ್ಜಿಯವರ ಧ್ವಜಾರೋಹಣದೊಂದಿಗೆ ಪ್ರಾರಂಭವಾಯಿತು. ಎಸ್. ಎಫ್. ಐ. ಅಧ್ಯಕ್ಷರಾದ ಶ್ರೀಧರ ಕುಲಕರ್ಣಿಯವರು ಅಧ್ಯಕ್ಷತೆ ವಹಿಸಿದ್ದರು. ಭೀಮಸಿ ಕಲಾದಗಿಯವರಿಂದ ಸ್ವಾಗತಿ ಭಾಷಣವಾದ ನಂತರ ಲೋಕಸಭೆ ಸದಸ್ಯರಾದ ಎಸ್. ಎಂ. ಗುರಡ್ಡಿಯವರು ಸಮ್ಮೇಳನವನ್ನು ಉದ್ಘಾಟಿಸಿ ಇಂದಿನ ಶಿಕ್ಷಣ ವ್ಯವಸ್ಥೆಯ ವಿರುದ್ಧ ವಿದ್ಯಾರ್ಥಿಗಳು ಹೋರಾಡಬೇಕೆಂದರು.

ಮುಖ್ಯ ಅತಿಥಿಗಳಾದ ಜಯಲಕ್ಷ್ಮಿ ಎನಾರ್ಳ ಅವರು ಇಂದಿನ ಹೊಸ ಶಿಕ್ಷಣ ನೀತಿಯನ್ನು ವಿರೋಧಿಸಬೇಕೆಂದೂ ಅಂಥ ಹೋರಾಟಕ್ಕೆ ಶಿಕ್ಷಕರ ಸಂಘ ಸಂಪೂರ್ಣ ಬೆಂಬಲ ನೀಡುತ್ತದೆಂದೂ ಹೇಳಿದರು. ರೈತ ಸಂಘದ ಅಧ್ಯಕ್ಷ ಭೀಮಸಿ ಕಲಾದಗಿಯವರು ಭ್ರಷ್ಟಾಚಾರದಿಂದ ವಿದ್ಯಾರ್ಥಿಗಳಿಗಾಗುತ್ತಿರುವ ಅನ್ಯಾಯವನ್ನು ಎತ್ತಿತೋರಿಸಿದರು. ಎಸ್. ಎಫ್. ಐ. ರಾಜ್ಯ ಸಮಿತಿ ಉಪಾಧ್ಯಕ್ಷರಾದ ಎಸ್. ವೈ. ಗುರುಶಾಂತ್ ಅವರು ಸಂಘಟನೆಯ ಧ್ಯೇಯಧೋರಣೆಗಳನ್ನು ವಿವರಿಸಿದರು. ಬಲಿಷ್ಟ ಸಂಘಟನೆಗೆ ಕರೆನೀಡಿದರು.

ಹಾಸನ ಎಸ್. ಎಫ್. ಐ. ಸಭೆ

ಹಾಸನದ ಕೃಷ್ಣ ಕಾನೂನು ಕಾಲೇಜಿನಲ್ಲಿ ಜನವರಿ 10ರಂದು ಎಸ್.ಎಫ್ ಐ. ಸಭೆ ನಡೆಯಿತು. ಸರ್ಕಾರ ವಿಜ್ಞಾನ, ಕಲಾ ಹಾಗೂ ವೆಂಕಟೇಶ್ವರ ಕಿರಿಯ ಕಾಲೇಜು ತಾಂತ್ರಿಕ ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಹೆಚ್. ಆರ್. ಲೋಕೇಶ್ ಸ್ವಾಗತಿಸಿ ಮೋಹನ್ ಅಧ್ಯಕ್ಷತೆ ವಹಿಸಿದ್ದರು, ಎಸ್.ಎಫ್.ಐ. ರಾಜ್ಯ ಸಹ ಕಾರ್ಯದರ್ಶಿ ಜಿ. ಸಿ. ಬೈಯಾರೆಡ್ಡಿಯವರು ಕಾರ್ಯಕ್ರಮ, ನೂತನ ಶಿಕ್ಷಣ ನೀತಿ, ಸಂಘಟನೆ ಬಲಿಷ್ಟವಾಗಿ ಬೆಳೆಸುವುದರ ಮಹತ್ವವನ್ನು ವಿವರಿಸಿದರು. ಕಾ|| ರಾಘವೇಂದ್ರ, ಶ್ರೀನಿವಾಸ್ ನಟೇಕರ್ ಮಾತನಾಡಿದರು, ಈ ಸಭೆಯಲ್ಲಿ ನೂತನಸಂಘಟನಾಸಮಿತಿಗೆಲೋಕೇಶ್ [ಸಂಚಾಲಕ] ಸುರೇಂದ್ರನಾಥ್ ನಾಗರಾಜ್, ತಿಲಕ್, ಮಂಜುನಾಥ್ ಸಹ ಸಂಚಾಲಕರಾಗಿ ಆಯ್ಕೆಗೊಂಡರು.

ಬೇಡಿಕೆ ಒತ್ತಾಯಿಸಿ ರೈತರ ಧರಣಿ ಸತ್ಯಾಗ್ರಹ

ಬೆಂಗಳೂರು ಜಿಲ್ಲೆಯ ದಕ್ಷಿಣ ತಾಲೋಕು ಕರ್ನಾಟಕ ಪ್ರಾಂತ ರೈತ ಸಂಘದ ಆಶ್ರಯದಲ್ಲಿ ತಾಲೋಕಿನ ರೈತ-ಕೃಷಿ ಕೂಲಿಗಾರರ ಸಮಸ್ಯೆಗಳನ್ನು ಬಗೆ ಹರಿಸಲು ರಾಜ್ಯ ಸರ್ಕಾರವನ್ನು ಒತ್ತಾಯಿಸಿ ಜನವರಿ 11 ರಿಂದ ತಾಲೋಕು ಕಛೇರಿ ಮುಂದೆ ಸರದಿ ಧರಣಿ ರೈತರು ಸತ್ಯಾಗ್ರಹವನ್ನು ಆರಂಭಿಸಲಾಗಿದೆ. ಪ್ರತಿ ಹೋಬಳಿಯಿಂದ 5 ದಿನಗಳ ಕಾಲ ರೈತರು ಧರಣಿಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಬಗರ್ ಹುಕುಂ ಸಾಗುವಳಿ ಮಾಡುವ ಬಡ ರೈತರಿಗೆ ಸರ್ಕಾರ ಈ ಕೂಡಲೇ ಹಕ್ಕು ಪತ್ರ ನೀಡಬೇಕು, ನಿವೇಶನ ರಹಿತರಿಗೆ ನಿವೇಶನದ ಹಕ್ಕು ಪತ್ರ, ಎಲ್ಲಾ ಬಡ ರೈತರಿಗೂ ಹಸಿರು ಕಾರ್ಡ್ ವಿತರಣೆ, ಪಡಿತರ ವ್ಯವಸ್ಥೆ, ರೈತರು ಬೆಳೆದ ಬೆಳೆಗೆ ಬೆಂಬಲಿತ ಬೆಲೆ ನೀಡಬೇಕೆಂಬ ರೈತರ ಮೂಲ ಭೂತ ಸಮಸ್ಯೆಗಳಿಗಾಗಿ ನಡೆಯುತ್ತಿರುವ ನ್ಯಾಯಯುತ ಹೋರಾಟದ ಕುರಿತು ಅಧಿಕಾರಿಗಳು ಹಾಗೂ ಸರ್ಕಾರ ಗಮನ ಹರಿಸದಿರುವುದನ್ನು ಬೆಂಗಳೂರು ಜಿಲ್ಲಾ ರೈತ ಸಂಘ ತೀವ್ರವಾಗಿ ಖಂಡಿಸಿದೆ. ಈ ಕುರಿತು ಸರ್ಕಾರ ನಿರ್ಲಕ್ಷ್ಯ ತಳೆದರೆ ಜಿಲ್ಲೆಯಾದ್ಯಂತ ರೈತರ ಹೋರಾಟವನ್ನು ಪ್ರಾರಂಭಿಸಲಾಗುವುದೆಂದು ಎಚ್ಚರಿಸಿದೆ

ಸರ್ಕಾರ ಮಧ್ಯ ಪ್ರವೇಶ ಮಾಡಿ ರೈತರ ಬೇಡಿಕೆಗಳನ್ನು ಬಗೆ ಹರಿಸಲು ಒತ್ತಾಯಿಸಿ ಫೆಬ್ರುವರಿ 3ರಂದು ರೈತ ಸಂಘದ ನೇತೃತ್ವದಲ್ಲಿ ಜಿಲ್ಲೆಯ ರೈತರ ಬೃಹತ್ ಮತ ಪ್ರದರ್ಶನ ನಡೆಸಲಾಗುವುದೆಂದು ಜಿಲ್ಲಾ ಕಾರ್ಯದರ್ಶಿ ಕಾ|| ಪಿ. ಜಗನ್ನಾಥ್ ಹಾಗೂ ಸಹ ಕಾರ್ಯದರ್ಶಿ ಕಾ.ಲಕ್ಕಣ್ಣನವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಪ್ರಾಂತ ರೈತ ಸಂಘದ ಖಂಡನೆ

ರೈತರ ಸಮಸ್ಯೆಗಳನ್ನು ಸಮಾಧಾನಕರ ರೀತಿಯಲ್ಲಿ ಬಗೆಹರಿಸುವ ಕ್ರಮ ವಹಿಸುವುದಾಗಿ ಆಶ್ವಾಸನೆ ನೀಡಿ ಅಧಿಕಾರಕ್ಕೆ ಬಂದ ರಾಮಕೃಷ್ಣ ಹೆಗ್ಗಡೆಯವರು ಇತ್ತೀಚೆಗೆ ಹುಬ್ಬಳ್ಳಿ, ಬೆಳಗಾಂ, ರಾಮದುರ್ಗದಲ್ಲಿ ನಡೆದ ರೈತರ ನ್ಯಾಯ ಯುತ ಚಳುವಳಿಯ ಮೇಲೆ ಪೋಲಿಸ್ ದಬ್ಬಾಳಿಕೆ ಲಾಠಿಚಾರ್ಜ ನಡೆಸಿರುವುದನ್ನೂ ಹಾಗೂ ಅಲ್ಲಿ ಹಾಕಿರುವ ಪ್ರತಿಬಂಧಕಾಜ್ಞೆಯನ್ನು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಕಾ|| ಎಂ. ಎನ್. ಉಗ್ರಪ್ಪ ಹಾಗೂ ಕಾರ್ಯದರ್ಶಿ ಕಾ|| ಪಿ. ಜಗನ್ನಾಥ ಹೇಳಿಕೆಯಲ್ಲಿ ಖಂಡಿಸಿದ್ದಾರೆ.

ಐ.ಟಿ.ಸಿ. ಕಾರ್ಮಿಕರ ಸಮಸ್ಯೆ ಬಗೆ ಹರಿಸಿ, ಹುಣಸೂರು ಮಾರುಕಟ್ಟೆಯಲ್ಲಿ ಕುಸಿದಿರುವ ತಂಬಾಕಿನ ಬೆಲೆಗೆ ನ್ಯಾಯಬೆಲೆ ಸಿಗಬೇಕೆಂದು ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಐ. ಟಿ. ಸಿ. ಕಾರ್ಮಿಕರ ಬೆಂಬಲಾರ್ಥ ಕಾರ್ಮಿಕರ ಸಮಾವೇಶ

ಬೆಂಗಳೂರಿನಲ್ಲಿರುವ ಇಂಡಿಯನ್ ಟೊಬ್ಯಾಕೋ ಕಂಪೆನಿ (ಐ. ಟಿ. ಸಿ.) ಮಾಲಕ ವರ್ಗದ ಕಾರ್ಮಿಕ ವಿರೋಧಿ ನೀತಿಯ ವಿರುದ್ಧ, ಕೆಲಸಗಾರರು 87 ನವಂಬರ್ 7 ರಿಂದ ಅನಿರ್ದಿಷ್ಟ ಮುಷ್ಕರ ಮಾಡುತ್ತಿದ್ದು, ಅವರ ಹೋರಾಟಕ್ಕೆ ಬೆಂಬಲ ನೀಡಲು ಕಾರ್ಮಿಕ ಸಂಘಗಳ ಸಮಾವೇಶ 12-1-88 ರಂದು ಬೆಂಗಳೂರಿನ ಟೌನ್ ಹಾಲ್‌ನಲ್ಲಿ ಸೇರಿತ್ತು. ಆ ಸಭೆಯಲ್ಲಿ ಕಾರ್ಮಿಕ ಮುಖಂಡರಾದ ಎಸ್. ಸೂರ್ಯನಾರಾಯಣ ರಾವ್ ಎನ್ ಕೆ. ಉಪಾಧ್ಯಾಯ (ಸಿ. ಐ. ಟಿ. ಯು.) ಎಂ. ಸಿ. ನರಸಿಂಹನ್ (ಎ. ಐ. ಟಿ. ಯು. ಸಿ.) ಸೋಮನಾಥನ್, ಕೆ. ಎ. ರಾಮಮೂರ್ತಿ (ಹೆಚ್. ಎಂ. ಎಸ್.), ನಾರಾಯಣ ಸ್ವಾಮಿ, ಹಿಂದೂಸ್ಥಾನ ಏರೋನಾಟಿಕ್ ಎಂಪ್ಲಾಯಿಸ್ ಯೂನಿಯನ್, ಆನಂದ ರಾವ್, ರಿಸರ್ವ ಬ್ಯಾಂಕ್ ಎಂಪ್ಲಾಯಿಸ್ ಅಸೋಸಿಯೇಶನ್, ಪಿ. ಜಗನ್ನಾಥ ಕರ್ನಾಟಕ ಪ್ರಾಂತ ರೈತ ಸಂಘ, ನಾಗ ಮೋಹನದಾಸ್ (ಅಧ್ಯಕ್ಷರು ಡಿ. ವೈ. ಎಫ್. ಐ.) ಗೋಪಾಲ ಗೌಡ (ಅಖಿಲಭಾರತ ಲಾಯರ್ಸ್ ಅಸೋಸಿಯೇಶನ್), ಶಂಕರೇಗೌಡ, ಮೈಕೋ ಎಂಪ್ಲಾಯೀಸ್ ಅಸೋಸಿಯೇಶನ, ಕೆ. ಸುಬ್ರಮಣ್ಯ,ವೋಲ್ಟಾ ಮತ್ತು ವೋಲ್ಟಾರ್ಟೆ ಎಂಪ್ಲಾಯೀಸ್‌ಅಸೋಸಿಯೆಶನ ಮುನಿರೆಡ್ಡಿ, ಬಿ. ಇ.ಎಲ್. ಎಂಪ್ಲಾಯೀಸ್ ಯೂನಿಯನ್, ಮೊದಲಾದವರು ಭಾಷಣ ಮಾಡಿ ಐ. ಟಿ. ಸಿ. ಕೆಲಸಗಾರರ ಹೋರಾಟಕ್ಕೆ ಬೆಂಬಲ ವ್ಯಕ್ತ ಮಾಡಿದರು. ವೇತನ ಮತ್ತು ಬೋನಸ್ಸನ್ನು ಉತ್ಪಾದನೆಗೆ ಹೊಂದಿಸುವ ಕಂಪ್ಯೂಟರೀಕರಣ, ಅತ್ಯಾಧುನಿಕ ಯಂತ್ರೀಕರಣಗಳೆಲ್ಲ ದೇಶದ ಎಲ್ಲಾ ಕಾರ್ಮಿಕರ ಸೇವೆಗೂ ಆತಂಕ ಒಡ್ಡುತ್ತಿದ್ದು, ಐ. ಟಿ. ಸಿ. ಕಾರ್ಮಿಕರ ಹೋರಾಟ ಇತರ ಎಲ್ಲಾ ಕಾರ್ಮಿಕರ ಪರವಾಗಿಯೇ ಇರುವುದರಿಂದ, ಅದಕ್ಕೆ ಬಹಳ ಮಹತ್ವವಿದೆಂಬ ಅಂಶವನ್ನು ಒತ್ತಿಹೇಳಿದ ಭಾಷಣಕಾರರು, ಈ ಮುಷ್ಕರವನ್ನು ರಾಜ್ಯ ಸರಕಾರ ಪ್ರತಿಬಂಧಿಸಿರುವುದನ್ನು ಖಂಡಿಸಿ, ಸರಕಾರದ ಇಂಥ ಕ್ರಮದ ಕುರಿತು ತನಗೇನೂ ಗೊತ್ತಿಲ್ಲೆಂದು ಕಾರ್ಮಿಕ ಮಂತ್ರಿ ಕಾಂತಾ ಹೇಳಿರುವುದಕ್ಕೆ ಆಶ್ಚರ್ಯ ವ್ಯಕ್ತ ಮಾಡಿ ಮಾಲಕ ವರ್ಗ ಕಾರ್ಮಿಕರ ಬೇಡಿಕೆಗಳನ್ನು ಒಪ್ಪಿಕೊಳ್ಳದಿದ್ದರೆ, ಬೆಂಗಳೂರು ಬಂದ್ ಆಚರಿಸಿ ಹೋರಾಟ ತೀವ್ರಗೊಳಿಸಬೇಕಾದೀತೆಂಬ ಎಚ್ಚರಿಕೆ ನೀಡಿದರು.

ಬಳ್ಳಾರಿ ಜನತೆಯ ಬೇಡಿಕೆಗಾಗಿ ಮತ ಪ್ರದರ್ಶನ

ಬಳ್ಳಾರಿ ಜಿಲ್ಲೆಯ ರೈತ-ಕಾರ್ಮಿಕ, ವಿದ್ಯಾರ್ಥಿ-ಯುವ ಜನತೆ ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳ ಇತ್ಯರ್ಥಕ್ಕಾಗಿ ಹಲವಾರು ಬಾರಿ ಹೋರಾಟ ನಡೆಸಿದಾಗ್ಯೂ ಚರ್ಚೆ ನಡೆಸಿ ಸಮಸ್ಯೆ ಬಗೆ ಹರಿಸುವಲ್ಲಿ ನಿರ್ಲಕ್ಷ್ಯ ತೋರುತ್ತಿರುವುದನ್ನು ಪ್ರತಿಭಟಿಸಿ ತೀವ್ರರೀತಿಯ ಹೋರಾಟ ರೂಪಿಸಲು ಜನವರಿ 6 ರಂದು ಸಿ. ಐ. ಟಿ. ಯು, ಕರ್ನಾಟಕ ಪ್ರಾಂತ ರೈತ ಸಂಘ, ಎಸ್. ಎಫ್. ಐ, ಡಿ. ವೈ. ಎಫ್. ಐ. ಸಂಘಟನೆಗಳ ಜಿಲ್ಲಾ ನಾಯಕರು ಸಭೆ ಸೇರಿ ಜಂಟಿ ಕ್ರಿಯಾ ಸಮಿತಿ ರಚಿಸಲಾಗಿದೆ. ಮುಚ್ಚಿರುವ ಕಾರ್ಖಾನೆಗಳನ್ನು ತೆರೆಯಬೇಕು, ಕನಿಷ್ಟ ವೇತನ ಕಡ್ಡಾಯ ಜಾರಿಗೆ ತರಬೇಕು. ಹರಾಂಪೂರ್ ಸಿ. ಮತ್ತು ಡಿ. ಹಾಗೂ ಇನಾಂ ಜಮೀನು ಸಾಗುವಳಿ ಮಾಡುತ್ತಿರುವ ಬಡ ರೈತರಿಗೆ ಪಟ್ಟಾ ನೀಡಬೇಕು. ಜಿಲ್ಲೆಯಾದ್ಯಂತ ವ್ಯಾಪಕವಾಗಿ ನೀರಾವರಿ ಸೌಲಭ್ಯ ಒದಗಿಸಬೇಕು, ಕೃಷಿ ಕಾರ್ಮಿಕರಿಗೆ ವಸತಿ, ಕನಿಷ್ಟಕೂಲಿ ನಿಗದಿ, ಎ. ಪಿ. ಎಂ. ಸಿ. ಅನಧಿಕೃತ ವಸೂಲಿ ಮಾಡುವ ಕಮಿಷನ್ ರದ್ಧತಿ,ಸೂರ್ಯಕಾಂತಿ ಬೆಳೆ ನಷ್ಟ ಪರಿಹಾರ, ಬೆಳೆದ ಬೆಳೆಗೆ ನ್ಯಾಯ ಬೆಲೆ, ಖಾಸಗಿ ಶಿಕ್ಷಣ ಸಂಸ್ಥೆ ರಾಷ್ಟ್ರೀಕರಣ, ಕಾಲೇಜುಗಳಿಗೆ ನೀಡುವ ಸ್ವಾಯತ್ತತೆ ಹಿಂತೆಗೆದುಕೊಳ್ಳಬೇಕು. ಖಾಲಿ ಇರುವ ಹುದ್ದೆಗಳ ಭರ್ತಿ, ವಿಜಯನಗರ ಉಕ್ಕಿನ ಕಾರ್ಖಾನೆ ಕೆಲಸ ಪ್ರಾರಂಭಿಸಬೇಕು. ಕೊಳಚೆ ಪ್ರದೇಶಗಳಿಗೆ ಮಾನ್ಯತೆ ನೀಡಿ ನಾಗರೀಕ ಸೌಲಭ್ಯ ನೀಡಬೇಕು ಮುಂತಾದ ಬೇಡಿಕೆಗಳನ್ನು ಒತ್ತಾಯಿಸಿ ಜನವರಿ 29 ರಂದು ಜಿಲ್ಲಾ ಪರಿಷತ್ ಕಛೇರಿ ಮುಂದೆ ಬೃಹತ್ ಪ್ರತಿಭಟನಾಪ್ರದರ್ಶನನಡೆಸಲು ತೀರ್ಮಾನಿಸಲಾಯಿತೆಂದು ಕ್ರಿಯಾ ಸಮಿತಿ ಸಂಚಾಲಕ ಕಾ|| ಎಸ್. ಪ್ರಸನ್ನ ಕುಮಾರ್ ತಿಳಿಸಿದ್ದಾರೆ.

ಭವಿಷ್ಯ ನಿಧಿಗಾಗಿ ಬೀಡಿ ಕಾರ್ಮಿಕರ ಒತ್ತಾಯ

ಧಾರವಾಡ ಜಿಲ್ಲೆಯ ಹುಬ್ಬಳ್ಳಿ ಭವಿಷ್ಯ ನಿಧಿ ಕಛೇರಿ ಮುಂದೆ ಸಿ. ಐ. ಟಿ. ಯು. ನೇತೃತ್ವದ ಬೀಡಿ ಕಾರ್ಮಿಕ ಸಂಘದ ವಿವಿಧ ಜಿಲ್ಲೆಯ ಕಾರ್ಮಿಕರು ರಾಜ್ಯ ಸಮಿತಿ ಕರೆಯಂತೆ, ಜನವರಿ 11 ರಂದು ಸಾಮೂಹಿಕ ಧರಣಿ ಸತ್ಯಾಗ್ರಹ ನಡೆಸಿದರು.

1977 ರಿಂದ ಬೀಡಿ ಕಾರ್ಮಿಕರಿಗೆ ಭವಿಷ್ಯ ನಿಧಿ ಅನ್ವಯಗೊಳಿಸಿ ಹಣ ಸಂಗ್ರಹಿಸಿದರೂ ಮಾಲೀಕರು ಭವಿಷ್ಯ ನಿಧಿ ಇಲಾಖೆಗೆ ಜಮಾ ಮಾಡದೇ ಮೋಸ ಮಾಡಿರುವುದರ ಕುರಿತು ಸಹಾ

(8ನೇ ಪುಟ ನೋಡಿ)

ಅಮೆರಿಕನ್ "ಭದ್ರತೆ"ಗಾಗಿ ಭಾರತದ ಭದ್ರತೆಗೆ ಅಪಾಯ !

ಕಳೆದ ಆಗಸ್ಟ್ 7 ರಂದು ಅಮೆರಿಕನ್ ಸಂಸತ್ತಿನ ಸಮಿತಿಯೊಂದು ಪಾಕಿಸ್ತಾನಕ್ಕೆ ಅಮೆರಿಕನ್ ನೆರವನ್ನು ನಿಲ್ಲಿಸಿತ್ತು. ಕಾರಣ ಪಾಕಿಸ್ತಾನೀ ಮೂಲದ ಕೆನೆಡಿಯನ್ ನಾಗರಿಕ ಅರ್ಷಾದ್‌ಪರ್ವೇಝು ಎಂಬಾತ ಪರಮಾಣುಬಾಂಬ್ ತಯಾರಿಸುವ ತಂತ್ರಜ್ಞಾನವನ್ನು ಪಾಕೀಸ್ತಾನಕ್ಕೆ ಕದೊಯ್ದಿದ್ದ ಎಂಬ ಆಪಾದನೆಗೊಳಗಾಗಿದ್ದ. ಈ ಚೌರ್ಯದಲ್ಲಿ ಪಾಕಿಸ್ತಾನೀ ಸರ್ಕಾರದ ಕೈವಾಡವೂ ಇದೆ ಎಂದು ಶಂಕಿಸಲಾಗಿತ್ತು. ಆದರೆ ಇದೇ ಜನವರಿ 16 ರಂದು ಅಮೆರಿಕನ್ ವಿದೇಶೀ ನೆರವು ಕಾನೂನಿಗೆ ಸಿಮಿಂಗ್ಟನ್ ಅಂಡ್ ಸೊಲಾರ್ಝ್ ತಿದ್ದುಪಡಿಗೆ ಅಧ್ಯಕ್ಷ ರೇಗನ್ ಸಹಿ ಹಾಕುವ ಮೂಲಕ ಪಾಕಿಸ್ತಾನಕ್ಕೆ 26 ಕೋಟಿ ಡಾಲರುಗಳ ಮಿಲಿಟರಿ ನೆರವು ಹಾಗೂ 22 ಕೋಟಿ ಡಾಲರುಗಳ ಆರ್ಥಿಕ ನೆರವು ಮತ್ತೆ ಆರಂಭವಾದಂತಾಗಿದೆ. "ಅಮೆರಿಕಾದ ರಾಷ್ಟ್ರೀಯ ಭದ್ರತೆಗೆ ಅವಶ್ಯಕ" ಎಂದು ಅಧ್ಯಕ್ಷರು ಭಾವಿಸಿದರೆ ನೆರವು ಪುನರಾರಂಭಿಸಲು ಈ ತಿದ್ದುಪಡಿ ಅವಕಾಶ ಕೊಡುತ್ತದೆ.

ಆದರೆ ಗಮನಾರ್ಹ ಸಂಗತಿಯೆಂದರೆ ರೇಗನ್ ಸಹಿ ಹಾಕುವ ಕೇವಲ ಎರಡು ದಿನಗಳ ಮೊದಲಷ್ಟೇ ಮೇಲೆ ಹೇಳಿದ ಪರ್ವೇಝು ಘಟನೆಯಲ್ಲಿ ಪಾಕಿಸ್ತಾನದ ಕೈವಾಡವಿತ್ತೆಂಬ ನಿರ್ಧಾರಕ್ಕೆ ಅಮೆರಿಕನ್ ವಿದೇಶಾಂಗ ಖಾತೆ ಬಂದಿತ್ತು ! ಇಷ್ಟೇ ಅಲ್ಲ ಕೇವಲ ಹಿಂದಿನ ದಿನವಷ್ಟೇ ಪಶ್ಚಿಮ ಜರ್ಮನಿಯಿಂದ ಪಾಕಿಸ್ತಾನಕ್ಕೆ ಪರಮಾಣು ಶಸ್ತ್ರಾಸ್ತ್ರ ತಯಾರಿಸಲು ಅಗತ್ಯವಾದ ಸಾಮಗ್ರಿಗಳು ಕಳ್ಳತನದಿಂದ ಪೂರೈಸಲ್ಪಡುತ್ತಿದ್ದವು ಎಂದು ಪಶ್ಚಿಮಜರ್ಮನಿಯ ಪತ್ರಿಕೆ ವರದಿ ಮಾಡಿತ್ತು.

ಆದರೂ ಅಧ್ಯಕ್ಷರೇಗನ್ ಈ ತಿದ್ದುಪಡಿಗೇಕೆ ಸಹಿ ಹಾಕಿದರು? "ದಕ್ಷಿಣ ಏಷ್ಯಾದಲ್ಲಿ ಅಮೆರಿಕನ್ ಧೋರಣೆಯನ್ನು ರೂಪಿಸುವುದು ವಿದೇಶಾಂಗ ಖಾತೆಯಲ್ಲಿ, ಸಿ.ಐ.ಎ. ಮತ್ತು ಪೆಂಟಗಾನ್ (ಸೈನಿಕ ಮುಖ್ಯಾಲಯ) ಈ ವಾಸ್ತವತೆಯನ್ನು ನಾವು ಮರೆಯಬಾರದು" ಎಂದು ಅಮೆರಿಕನ್ ಪತ್ರಿಕೆಯೊಂದು ವರದಿ ಮಾಡಿದೆ. ಹೌದು ಅದರಿಂದಾಗಿಯೇ ಭಾರತದ ಭದ್ರತೆಗೆ ಅಪಾಯವೊಡ್ಡುವ ಸಂಗತಿ "ಅಮೆರಿಕನ್ ಭದ್ರತೆಯ ದೃಷ್ಟಿಯಿಂದ" ಅವಶ್ಯಕವಾಗುತ್ತದೆ!

ಸಂಕ್ಷಿಪ್ತ ಸುದ್ದಿಗಳು

ತುರ್ಕಿ ಕಮ್ಯುನಿಸ್ಟರ ಮೇಲೆ ಅಮಾನುಷ ದಮನ

ತುರ್ಕಿ ಆಡಳಿತಗಾರರು ಕೆಲವು ವಾರಗಳ ಹಿಂದೆ "ಪ್ರಜಾಪ್ರಭುತ್ವೀಕರಣ"ದ ಪ್ರಕ್ರಿಯೆ ಆರಂಭಿಸುತ್ತಿರುವುದಾಗಿ ಘೋಷಿಸಿದ್ದರು, ರಾಜಕೀಯ ಪಕ್ಷಗಳಿಗೆ ತಮ್ಮ ಕಾರ್ಯನಿರ್ವಹಿಸಲು ಅವಕಾಶ ನೀಡುವುದಾಗಿ ಘೋಷಿಸಿದ್ದರು.ಆದರೆ ಇದು ಕೇವಲ ಒಂದು ಪೊಳ್ಳುಮಾತು ಎಂಬುದು ಕೆಲವೇ ದಿನಗಳಲ್ಲಿ ಸ್ಪಷ್ಟವಾಗಿದೆ. ತುರ್ಕಿ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಹೈದರ್‌ಕಟ್ಲು ಹಾಗೂ ತುರ್ಕಿಕಾರ್ಮಿಕ ಪಕ್ಷದ ಪ್ರಧಾನ ಕಾರ್ಯದರ್ಶಿ ನಿಹಾಯತ್ ಸರ್ಗಿನ್ ಈ ಇಬ್ಬರೂ ದೇಶದಿಂದ ಓಡಿಸಲ್ಪಟ್ಟಿದ ಮುಖಂಡರನ್ನು ಕಾನೂನುಬದ್ಧವಾಗಿ ತುರ್ಕಿಯನ್ನು ಪ್ರವೇಶಿಸಿದತಕ್ಷಣವೇ ಬಂಧಿಸಿತೀವ್ರ,ಚಿತ್ರಹಿಂಸೆಗೆಗುರಿಪಡಿಲಾಗಿದೆ ಇದರ ಜೊತೆಗೇ ದೇಶಾದ್ಯಂತ ಕಮ್ಯುನಿಸ್ಟರ ತೀವ್ರ ಬೇಟೆಯೇ ನಡೆಯಲಾರಂಭಿಸಿದೆ. "ಮಾನವ ಹಕ್ಕುಗಳ ಧೋರಣೆ ಒಂದು ಗಂಭೀರ ಧೋರಣೆಯಾಗಬೇಕಾದರೆ ಅದು ಕಮ್ಯುನಿಸ್ಟ್ ವಿರೋಧಿಯಾಗಿರಲೇಬೇಕು" ಎಂದು ತುರ್ಕಿಗೆ ಭೇಟಿ ನೀಡಿದ್ದ ಅಮೆರಿಕನ್ ಉಪ ವಿದೇಶಾಂಗ ಮಂತ್ರಿ ನೀಡಿರುವ ಸಲಹೆಯೂ ಈ ದಮನ ಚಕ್ರಕ್ಕೆ, ಒಂದು ಕಾರಣ ಎನ್ನಲಾಗುತ್ತಿದೆ.

ಎಲ್‌ಸಾಲ್ವಡೋರ್‌ನಲ್ಲಿ

ಎಲ್‌ಸಾಲ್ವಡೋರ್‌ನಲ್ಲಿ ಮಾನವ ಹಕ್ಕುಗಳ ಪರಿಸ್ಥಿತಿ ಬಹಳಷ್ಟು ಸುಧಾರಿಸಿದೆ ಎಂದು ಅಮೆರಿಕನ್ ವಿದೇಶಾಂಗ ಖಾತೆ ಹೇಳುತ್ತಾ ಸಾಲ್ವಡೋರ್ ಪೋಲೀಸ್ ಪಡೆಗೆ 90ಲಕ್ಷ ಡಾಲರ್ ನೆರವು ಪಡೆಯುತ್ತಿದಂತೆಯೇ ಅತ್ತ ಎಲ್‌ಸಾಲ್ವಡೋರ್ ಮಾನವ ಹಕ್ಕುಗಳ ಆಯೋಗದ ಮುಖ್ಯಸ್ಥರಾದ ಹರ್ಬರ್ಟ್ ಅನಯಾರನ್ನು ಅಪರಿಚಿತ ಕೊಲೆಗಾರರು ಗುಂಡಿಟ್ಟು ಕೊಂದಿದ್ದಾರೆ. ಈ ಪುಟ್ಟದೇಶದಲ್ಲಿ ಅಂತ ಯುದ್ಧ ಪ್ರಾರಂಭವಾಗಿ ಈ ತಿಂಗಳು ಏಳು ವರ್ಷ ಕಳೆಯಿತು. ಈ ಏಳು ವರ್ಷಗಳಲ್ಲಿ ಕೊಲೆಯಾದ ಮಾನವಹಕ್ಕು ಆಯೋಗದ ಮುಖಂಡರಲ್ಲಿ ಇವರು ನಾಲ್ಕನೇಯವರು ಮತ್ತು ಈ ಏಳು ವರ್ಷಗಳಲ್ಲಿ ಗುಪ್ತ ಪೋಲೀಸರಿಗೆ ಹಾಗೂ ಬಲಪಂಥೀಯ ಸಾವಿನ ಪಡೆಗಳಿಗೆ ಬಲಿಯಾದ ಅರವತ್ತುಸಾವಿರ ಜನರಲ್ಲಿ ಒಬ್ಬರು !

ಪ್ಯಾಲೆಸ್ಟೇನಿಯನ್ನರ ಧೀರ ಪ್ರತಿರೋಧ

ಇಸ್ರೇಲ್ ಪಡೆಗಳ ಅಮಾನುಷ ದಮನ ಕ್ರಮಗಳಿಗೆ ಜಗ್ಗದೆ ಪ್ಯಾಲೆಸ್ಟೇನಿಯಾದ ನಿರಾಶ್ರಿತರು ಕಳೆದ ಸುಮಾರು ಒಂದು ತಿಂಗಳಿಂದ ಅತ್ಯಂತ ಸಾಹಸದಿಂದ ಹೋರಾಡುತ್ತಿದ್ದಾರೆ. ಇಸ್ರೇಲ್ ಆಕ್ರಮಿತ ಜೆರುಸಲೇಂ, ಗಾಝಾ ಮೊದಲಾದ ಅರಬ್ ಪ್ರದೇಶಗಳಲ್ಲಿ ಹೆಂಗಸರು,ಮಕ್ಕಳೂ, ಕೂಡಾ ಪ್ಯಾಲೆಸ್ಟೇನಿಯನ್ ಬಾವುಟ ಹಿಡಿದು ಬೀದಿ ಕಾಳಗ ನಡೆಸುತ್ತಿದ್ದಾರೆ. ಈಗಾಗಲೇ 25ಕ್ಕೂ ಹೆಚ್ಚು ಮಂದಿ ಇಸ್ರೇಲೀ ಬುಲೆಟ್‌ಗಳಿಗೆ ಬಲಿಯಾಗಿದ್ದರೂ ಲೆಕ್ಕಿಸದೆ ಮತ ಪ್ರದರ್ಶನಗಳು ಮುಷ್ಕರಗಳೂ, ಅಮೇರಿಕನ್ ರಾಯಭಾರಿ ಕಛೇರಿಯೆದುರು ಪ್ರದರ್ಶನಗಳು ಸತತವಾಗಿ ಮುಂದುವರೆಯುತ್ತಿವೆ. ಇಸ್ರೇಲೀ ಸಶಸ್ತ್ರ ವಾಹನಗಳು, ಬುಲೆಟ್‌ಗಳು, ಅಶ್ರುವಾಯುಗಳೆದುರು ಪ್ಯಾಲೆಸ್ಟೇನಿಯನ್ ಜನತೆ ಕೇವಲ ಕಲ್ಲುಗಳಿಂದ ಹೋರಾಡುತ್ತಾ ಇಸ್ರೇಲೀ ಆಕ್ರಮಣಕಾರರು ಈ ಪ್ರದೇಶಗಳನ್ನು ಆಳಲಾರದಂತೆ ಮಾಡುತ್ತಿದ್ದಾರೆ.

ಇಸ್ರೇಲೀ ದಮನವನ್ನು ಜಗತ್ತಿಗೆ ಜಗತ್ತೇ ತೀವ್ರವಾಗಿ ಖಂಡಿಸುತ್ತಿದೆ. ವಿಶ್ವಸಂಸ್ಥೆ ಇದನ್ನು ಬಲವಾಗಿ ಖಂಡಿಸಿ ಠರಾವು ಅಂಗೀಕರಿಸಿದೆ. ಸಾಮಾನ್ಯವಾಗಿ ಇಂತಹ ಠರಾವುಗಳನ್ನು ವಿರೋಧಿಸುತ್ತಿದ್ದ ಅಮೇರಿಕಾ ಕೂಡಾ ಈ ಭಾರಿ ಈ ಠರಾವನ್ನು ವಿರೋಧಿಸುವ ಧೈರ್ಯ ಮಾಡಲಾಗಲಿಲ್ಲ. ಇಸ್ರೇಲೀ ಸರ್ಕಾರವನ್ನು ಸದಾ ಬೆಂಬಲಿಸುವ ಅಮೇರಿಕನ್ ಆಳುವ ವಲಯಗಳ ಕೆಲವು ವಿಭಾಗಗಳೂ ಕೂಡಾ ಇಸ್ರೇಲ್ "ಕೆಲವೊಮ್ಮೆ ನಾಗರೀಕ ಜಗತ್ತಿಗೆ ವಿಪರೀತವಾಗಿ ವರ್ತಿಸುತ್ತದೆ" ಎಂದು ಒಪ್ಪಿಕೊಳ್ಳಬೇಕಾಗಿ ಬಂದಿದೆ. ಆದರೂ ಇಸ್ರೇಲೀ ಸರ್ಕಾರ ಜಾಗತಿಕ ಅಭಿಪ್ರಾಯವನ್ನು ನಿರ್ಲಕ್ಷಿಸಿ ದಮನ ಮುಂದುವರೆಸುತ್ತಿದೆ.

ಜನವರಿ 19. ರಂದು ನಡೆದ ವಿಶ್ವಸಂಸ್ಥೆಯ ಭದ್ರತಾ ಸಮಿತಿ ಇಸ್ರೇಲೀಗಳ ಬರ್ಬರತೆಯನ್ನು ತೀವ್ರವಾಗಿ ಖಂಡಿಸುವ ಠರಾವನ್ನು ಚರ್ಚಿಸಿತು. ಈ ಸಮಿತಿಯ 15 ಸದಸ್ಯ ದೇಶಗಳಲ್ಲಿ 13 ಈ ಠರಾವನ್ನು ಬಲವಾಗಿ ಬೆಂಬಲಿಸಿದರೂ ಅಮೇರಿಕಾ ತನ್ನ ನಿಷೇಧಾಧಿಕಾರ ಬಳಸಿ ಮತ್ತೊಮ್ಮೆ ತನ್ನ ನಿಜ ಬಣ್ಣವನ್ನು ಜಗತ್ತಿಗೆ ತೋರಿಸಿಕೊಟ್ಟಿತು. ಸಹಜವಾಗಿಯೇ ಭದ್ರತಾ ಸಮಿತಿಯ ಇನ್ನೊಂದು ಖಾಯಂ ಸದಸ್ಯ ದೇಶವಾದ ಬ್ರಿಟನ್ ಮತದಾನದಲ್ಲಿ ಭಾಗವಹಿಸಲಿಲ್ಲ !

ಐ. ಟಿ. ಸಿ. ಕಾರ್ಮಿಕರ ದಸ್ತಗಿರಿಯ ಖಂಡನೆ

ಶ್ರೀ ರಾಜೀವಗಾಂಧಿ ಸರಕಾರದ ಧೋರಣೆಯಾದ ಅನಿರ್ಬಂಧಿತ ಆಧುನೀಕರಣ ಮತ್ತುಗಣಕೀಕರಣ, ಉತ್ಪಾದಕತೆಗೆ ಜೋಡಿಸಿದ ಕೂಲಿ ಮತ್ತು ಬೋನಸ್‌ಗಳ ವಿರುದ್ಧವಾಗಿ ಬೆಂಗಳೂರಿನ ಐ. ಟಿ. ಸಿ. ಕಾರ್ಮಿಕರು 87 ರ ನವಂಬರ್ 7 ರಿಂದ ಅನಿರ್ಧಿಷ್ಟ ಕಾಲದ ಮುಷ್ಕರವನ್ನು ನಡೆಸುತ್ತಿದ್ದಾರೆ. ಡಿಸಂಬರ್ 14 ರಂದು ಒಂದು ಸಾಮೂಹಿಕ ಮನವಿಯನ್ನು ಸ್ವೀಕರಿಸಿದ ನಂತರ ಮುಖ್ಯಮಂತ್ರಿ ಮತ್ತು ಕೈಗಾರಿಕಾ ಮಂತ್ರಿಯವರು ವಿವಾದವನ್ನು ಬೇಗ ಬಗೆಹರಿಸುವ ಆಶ್ವಾಸನೆಯನ್ನು ಕೊಟ್ಟಿದ್ದರು. ಆದರೆ ಕರ್ನಾಟಕ ಸರ್ಕಾರವು ಮುಷ್ಕರವನ್ನು ನಿಷೇಧಿಸಿತು. ಕಾರ್ಮಿಕ ಸಚಿವರು ಜನವರಿ 5 ಮತ್ತು 14ರಂದು ಕರೆದಿದ್ದ ಸಭೆಗಳು ನಡೆಯಲಿಲ್ಲ.

ಜನತಾ ಸರ್ಕಾರವು ಜನವರಿ 9 ರಂದು ನಡೆಸಿದ ಜನೋತ್ಸವದ ಶರುವಾಯ ಅವುಲೇರಿ ಮುಷ್ಕರ ಮಾಡುತ್ತಿರುವ ಐ.ಟಿ ಸಿ. ಕಾರ್ಮಿಕರ ಮೇಲೆ ದ್ವೇಷ ಭಾವನೆಯನ್ನು ತಳೆದಿದೆ. ಅಖಿಲ ಭಾರತ ಐ.ಟಿ.ಸಿ. ಕಾರ್ಮಿಕರ ಒಕ್ಕೂಟವು ಕೊಟ್ಟಿರುವ ಕರೆಯ ಮೇರೆಗೆ ಜನವರಿ 15 ರಂದು ಅಖಿಲಭಾರತ ಮುಷ್ಕರ ನಡೆಯುವ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ ಪೋಲೀಸರು ಮುಷ್ಕರ ನಿರತ ಕಾರ್ಮಿಕರನ್ನು ಬಂಧಿಸುತ್ತಿದ್ದಾರೆ.

ಐ. ಟಿ ಸಿ. ಕಾರ್ಮಿಕರ ಕುರಿತು ಕರ್ನಾಟಕ ಸರ್ಕಾರದ ದ್ವೇಷ ಭಾವನೆಯನ್ನು ಸಿ. ಐ. ಟಿ. ಯು. ಖಂಡಿಸುತ್ತದೆ. ಮತ್ತು ಬಂಧಿತ ಕಾರ್ಮಿಕರನ್ನೆಲ್ಲಾ ಕೂಡಲೇಬಿಡುಗಡೆ ಮಾಡಬೇಕೆಂದು,ಬಂಧನ ತಂತ್ರವನ್ನು ನಿಲ್ಲಿಸಬೇಕೆಂದು, ಬಹು ರಾಷ್ಟ್ರೀಯ ಸಂಸ್ಥೆಯಾದ ಐ. ಟಿ ಸಿ. ಆಡಳಿತ ಮಂಡಳಿಯ ಒತ್ತಡ ಮತ್ತು ಪ್ರಲೋಭನೆಗಳಿಗೆ ಬಾಗದೆ, ವಿವಾದವನ್ನು ಬಗೆಹರಿಸಿ ಯಥಾ ಸ್ಥಿತಿಯನ್ನು ಸ್ಥಾಪಿಸಲು ಪರಿಣಾಮಕಾರಿಯಾಗಿ ಮಧ್ಯ ಪ್ರವೇಶ ಮಾಡಬೇಕೆಂದು ರಾಜ್ಯ ಸರ್ಕಾರವನ್ನು ಆಗ್ರಹ ಪಡಿಸುತ್ತದೆ.

ಇದು ನಿಮಗೆ ಗೊತ್ತೆ ?

ಮಾಸ್ಕೋ ಪಟ್ಟಣದ ಒಟ್ಟು ಜನಸಂಖ್ಯೆ 90 ಲಕ್ಷ ಇದು ಮಾಸ್ಕೋ ನಗರದ ಅಂಕಿಅಂಶಗಳ ಪ್ರಕಾರ ಬರದಿರುವ ವಿವರ.

ಮಾಸ್ಕೋದಲ್ಲಿ ಒಂದು ದಿವಸಕ್ಕೆ 345 ಮಕ್ಕಳು ಹುಟ್ಟುತ್ತವೆ. 245 ಮದುವೆಗಳು ರಿಜಿಸ್ಟರಾಗುತ್ತವೆ. ಪ್ರತಿದಿನವು 757 ಜನ ಮಾಸ್ಕೋ ವಾಸಿಗಳು ಶ್ರೇಷ್ಠವಾದ ಹೊಸ ಮನೆಗಳನ್ನು ನಿವೇಶನವಾಗಿ ಹೊಂದುತ್ತಾರೆ. ಮಾಸ್ಕೋ ನಗರದಲ್ಲಿ ನಗರ ಸಾರಿಗೆ ರೈಲು, ಬಸ್ಸು, ಕಾರುಗಳು, ಟಾಕ್ಸಿಗಳು, ಟ್ರಾಲಿ ಗಳಲ್ಲಿ ದಿನವಹಿ 1 ಕೋಟಿ 73 ಲಕ್ಷ ಜನ ಪ್ರಯಾಣ ಮಾಡುತ್ತಾರೆ ಇದರಲ್ಲಿ ಹೊರಗಿನಿಂದ ಒಂದು ದಿವಸದಲ್ಲಿ ಬರುವ 30 ಲಕ್ಷ ಜನ ಸೇರುತ್ತಾರೆ. ಒಂದು ದಿನದಲ್ಲಿ ಮಾಸ್ಕೋದಲ್ಲಿನ ಅಂಗಡಿಗಳು ಕೆಫೆಗಳು ಮತ್ತು ರೆಸ್ಟೋರೆಂಟ್‌ಗಳು 6.4 ಕೋಟಿ ರೂ. ವ್ಯಾಪಾರ ವಹಿವಾಟು ನಡೆಸುತ್ತವೆ. ಪ್ರತಿದಿನ ಬೆಳಗಿನ ಜಾವ ಪತ್ರಿಕೆಗಳು 6.7 ಕೋಟಿ ಮಾರಾಟವಾಗುತ್ತವೆ. ಪ್ರತಿದಿನ 3.70 ಲಕ್ಷ ಜನಗಳು ಮನರಂಜನೆಗಾಗಿ ಸಿನಿಮಾ ಮತ್ತು ನಾಟಕ, ಸರ್ಕಸ್‌ಗಳಿಗೆ ಹೋಗುತ್ತಾರೆ. ಪ್ರತಿದಿನ 506 ಕಾರುಗಳು 598 ರೆಫ್ರಿಜರೇಟರ್ 2810 ಟೆಲಿವಿಷನ್‌ಗಳು, 19,63,000 ಚದುರ ಮೀಟರ್ ಬಟ್ಟೆ ಉತ್ಪಾದನೆ ಮಾಡುತ್ತಾರೆ. ○

ಸಂಗ್ರಹ :ಬೃಹಸ್ಪತಿ

ಐ. ಎನ್. ಎಫ್. ಸಂಧಿಗೆ ಬಲಪಂಥೀಯರ ವಿರೋಧ

"ರಶ್ಯನ್ನರು ಸದ್ಯದಲ್ಲೇ ಬ್ರಿಟನ್ನಿನ ಗ್ರೀನ್‌ಹಾಂ ಕಾಮನನ್ನು ಒಂದೇ ಒಂದು ಗುಂಡು ಹಾರಿಸದೆ ವಶಪಡಿಸಿಕೊಳ್ಳಲಿದಾರೆ. ಸೋವಿಯತ್ ಪರೀಕ್ಷಕರೂ ಕಚೇರಿ, ಪರೀಕ್ಷಣಾ ಸಾಧನಗಳ ಕಛೇರಿ ಹಾಗೂ ಭಂಡಾರಗೃಹಕ್ಕಾಗಿ ಅವರು ಬ್ರಿಟಿಶರಿಂದಲೇ ಸಿಮೆಂಟ್ ಹಾಗೂ ಮರದ ದಿಮ್ಮಿಗಳನ್ನು ಕೇಳಲಿದ್ದಾರೆ.", "ಅಧ್ಯಕ್ಷ ರೇಗನ್ ಈ ಸಂಧಿಗೆ ಸಹಿ ಹಾಕಿ ಬುದ್ಧಿ ಕಳಕೊಂಡಿದ್ದಾರೆ. ಅದನ್ನು ರಶ್ಯನ್ನರಿಗೆ ಮಾರಿದ್ದಾರೆ." ಸೋವಿಯತ್ ಪ್ರಚಾರದ ಸಾಧನವಾಗಿ ಬಿಟ್ಟಿದ್ದಾರೆ.", "ಈ ಸಂಧಿ ಒಂದು ದುರಂತಮಯ ತಪ್ಪು, ಟೊಳ್ಳು ವಿಜಯ."

ಡಿಸಂಬರ್‌ನಲ್ಲಿ ವಾಶಿಂಗ್ಟನ್‌ನಲ್ಲಿ ಸಹಿ ಹಾಕಲ್ಪಟ್ಟ ಚಾರಿತ್ರಿಕ ಸಂಧಿಗೆ ಯುರೋಪು ಹಾಗೂ ಅಮೇರಿಕಾದ ಬಲಪಂಥೀಯ ತೀವ್ರವಾದಿಗಳ ಪ್ರತಿಕ್ರಿಯೆಗಳ ಸ್ಯಾಂಪಲ್ ಇದು. ನಾಟೋ ಸೈನಿಕ ಬಣದ ಅಧಿಕಾರಿಗಳು ಕೂಡಾ ಈ ಸಂಧಿಯನ್ನು ವಿರೋಧಿಸಿ ತಮ್ಮ "ರಕ್ಷಣೆ" ಗಾಗಿ ಬದಲೀ ಕ್ರಮ ಕೈಗೊಳ್ಳಬೇಕೆಂದು ವಾದಿಸುತ್ತಿದ್ದಾರಂತೆ. ಪರಮಾಣು ಯುದ್ಧ ನಡೆಯುದಿದ್ದರೆ ತಮ್ಮ ಗತಿಯೇನು ಎಂಬ ಭಯ ಇವರಿಗೆ !

ಅತ್ಯಂತ ಕಿರಿಯ ಸಂಶೋಧಕಿ

ಜನತಾ ಚೀನಾದ ಝೆಜಿಯಾಂಗ್ ಪ್ರಾಂತ್ಯದ ಡೋಂಗ್ಯಾಂಗ್ ಪಂಚಾಯತಿನ 9 ವರ್ಷದ ವಿದ್ಯಾರ್ಥಿನಿ ವುಚಾವೋ ಸೊಳ್ಳೆನಿವಾರಕ ಹೊಗೆ ಬತ್ತಿಗಳನ್ನಿಡುವ ಮಡಿಸಬಹುದಾದ ಟ್ರೇಯನ್ನು ರೂಪಿಸಿ ಅದಕ್ಕೆ ಚೀಣೀ ಪೇಟೆಂಟ್ ಕಚೇರಿಯಿಂದ ಪೇಟೆಂಟ್ ಪಡೆದಿದ್ದಾಳೆ. ಈ ಮೂಲಕ ಚೀಣಾದ ಪೇಟೆಂಟುದಾರರಲ್ಲಿ ಈಕೆ ಅತ್ಯಂತ ಕಿರಿಯ ಸಂಶೋಧಕಿಯಾಗಿದ್ದಾಳೆ ಎಂದು ಚೀಣೀ ಪತ್ರಿಕೆ ರೆನ್ಮಿನ್ ರಿಬಾವೋ ತಿಳಿಸಿದೆ.

ತಿದ್ದುಪಡಿ

ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆ ಎಸ್.ಎಫ್.ಐ. ಸಮ್ಮೇಳನದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಎಸ್.ಎಚ್ ಹಿರೇಮಠ ಅವರು ಭಾಗವಹಿಸಿದ್ದರು. ಈ ಸುದ್ದಿ ಐಕ್ಯರಂಗದಲ್ಲಿ ಬಿಟ್ಟು ಹೋಗಿದ್ದಕ್ಕಾಗಿ ವಿಷಾದಿಸುತ್ತೇವೆ.

ಭಾರತ್ ಬಂದ್ ಯಶಸ್ವಿಗೊಳಿಸಿ

(1ನೇ ಪುಟದಿಂದ)

ಸರ್ಕಾರಗಳ ವಿರುದ್ಧ ನಡೆಸುತ್ತಿರುವ ನಗ್ನ ಹಲ್ಲೆಗಳ ಕೆಲವು ಉದಾಹರಣೆಗಳು. ಇತರ ಕಾಂಗ್ರೆಸ್ಸೇತರ ರಾಜ್ಯ ಸರ್ಕಾರಗಳೂ ಇಂತಹ ಹಲ್ಲೆಗಳಿಂದ ಮುಕ್ತವಾಗಿಲ್ಲ ವಿಶೇಷವಾಗಿ ಹಣಕಾಸಿನ ವಿಚಾರದಲ್ಲಿ. ಆದ್ದರಿಂದಲೇ ಹಣಕಾಸು ಆಯೋಗದ ಕುರಿತು ಜ್ಯೋತಿ ಬಸು ರವರು ಆರಂಭಿಸಿದ ಪ್ರಯತ್ನಕ್ಕೆ ಹೆಚ್ಚಿನ ಕಾಂಗ್ರೆಸ್ಸೇತರ ಮುಖ್ಯಮಂತ್ರಿಗಳು ಬೆಂಬಲ ನೀಡಿ ಬೆಂಗಳೂರಿನಲ್ಲಿ ಈ ಬಗ್ಗೆ ಸಭೆ ನಡೆಯುವಂತಾಗಿದೆ. ಎಂದು ಕೇಂದ್ರ ಸಮಿತಿ ಅಭಿಪ್ರಾಯ ಪಟ್ಟಿದೆ.

ಆರ್ಥಿಕ ರಂಗದ ದುಃಸ್ಥಿತಿ

ವಾಣಿಜ್ಯ ಹಾಗೂ ಆರ್ಥಿಕ ರಂಗ ಪರಿಸ್ಥಿತಿ ಹದಗೆಡುತ್ತಿರುವುದರ ಬಗ್ಗೆ ತೀವ್ರ ಆತಂಕ ವ್ಯಕ್ತ ಪಡಿಸಿರುವ ಕೇಂದ್ರ ಸಮಿತಿ ಇದಕ್ಕೆ ಪ್ರಮುಖ ಹೊಣೆ ವಿಶ್ವ ಬ್ಯಾಂಕ್, ಐ. ಎಂ. ಎಫ್. ಗೆ ಶರಣಾದ ಕಾಂಗ್ರೆಸ್ [ಐ] ಸರಕಾರದ ಧೋರಣೆಗಳು ಎಂದಿದೆ. ಉಕ್ಕು ಕೈಗಾರಿಕೆಯನ್ನು ಖಾಸಗಿಯವರಿಗೆ ವಹಿಸಬೇಕು ಮತ್ತು ರೂಪಾಯಿಯ ಅಪ ಮೌಲ್ಯ ಮಾಡಬೇಕು ಎಂಬ ಈ ಸಾಮ್ರಾಜ್ಯಶಾಹೀ ಹಣಕಾಸು ಸಂಸ್ಥೆಗಳ ಬಹಿರಂಗ ಒತ್ತಾಯ ಇದಕ್ಕೆ ಇತ್ತೀಚಿನ ಉದಾಹರಣೆಗಳು. ಈಗಾಗಲೇ ವಿದೇಶೀಕರೆನ್ಸಿಗಳ ಗೊಂಚಲಿಗೆ ರೂಪಾಯಿಯ ಮೌಲ್ಯವನ್ನು ಲಗತ್ತಿಸಿದುದರಪರಿಣಾಮವಾಗಿ ರೂಪಾಯಿಯ ಬೆಲೆ ಸತತವಾಗಿ ಇಳಿಯುತ್ತಾ ಬರುತ್ತಿದೆ ಎಂದು ಕೇಂದ್ರ ಸಮಿತಿ ಹೇಳಿದೆ.

ಬರ ಪರಿಸ್ಥಿತಿ ಇದನ್ನು ಮತ್ತಷ್ಟು ಉಲ್ಬಣಗೊಳಿಸಿದೆ. ಅಧಿಕಾರಶಾಹಿ ಹಾಗೂ ಆಳುವ ಪಕ್ಷದ ಮುಖಂಡರುಗಳ ವ್ಯಾಪಕ ಭ್ರಷ್ಟಾಚಾರಗಳಿಂದಾಗಿ ಅಷ್ಟೊಂದು ಪ್ರಚಾರಗೊಳಿಸಿರುವ ಪರಿಹಾರ ನಿಷ್ಪ್ರಯೋಜಕವಾಗಿದೆ. ಬೆಲೆಯೇರಿಕೆ ಶೇಕಡಾ ಹತ್ತನ್ನೂ ಮೀರಿದೆ. ಆದ್ದರಿಂದ ರೈತಾಪಿ ಜನಗಳಿಗೆ ಪರಿಹಾರ ಹಾಗೂ ಸಾರ್ವಜನಿಕ ವಿತರಣಾ ವ್ಯವಸ್ಥೆಯ ವಿಸ್ತಾರಕ್ಕಾಗಿ ಒತ್ತಾಯಿಸಲು ಜನರನ್ನು ಅಣಿನೆರೆಸಿ ಹೋರಾಟಗಳನ್ನು ನಡೆಸಬೇಕೆಂದು ಎಲ್ಲಾ ಘಟಕಗಳನ್ನು ಕೇಂದ್ರ ಸಮಿತಿ ವಿನಂತಿಸಿಕೊಂಡಿದೆ.

ಬಿ.ಜೆ.ಪಿ.ಯ ಛಿದ್ರಕಾರಿ ಪಾತ್ರ

ವಿರೋಧ ಪಕ್ಷಗಳನ್ನು ಒಡೆದು ಕೋಮುವಾದವನ್ನು ಉದ್ರೇಕಿಸುವ ಬಿ.ಜೆ.ಪಿ. ಪ್ರಯತ್ನಗಳನ್ನು ವಿಫಲಗೊಳಿಸುವ ಎಡ ಪಕ್ಷಗಳ ದೃಢ ನಿಲುವಿನಿಂದಾಗಿ ಒಂಟಿಯಾಗಿ ಬಿಟ್ಟಿರುವ ಬಿ.ಜೆ.ಪಿ.ಯ ಬಲ ಸಂಧೀಯ ಹಾಗೂ ಪ್ರತಿಗಾಮೀಬಣ್ಣಗಳೆಲ್ಲಾ ಈಗ ಸ್ಪಷ್ಟವಾಗಿ ಕಾಣಬರಲಾರಂಭಿಸಿವೆ ಎಂದು ಕೇಂದ್ರ ಸಮಿತಿ ಗಮನಿಸಿದೆ. ಆದ್ದರಿಂದ ಅದೀಗ ಕಮ್ಯುನಿಸ್ಟ್ ವಿರೋಧಿ ವಿಷಕಾರಲಾಂಭಿಸಿದೆ. ಕೇರಳದಲ್ಲಿ ದೇವಸ್ಥಾನಗಳನ್ನು ಆರ್.ಎಸ್.ಎಸ್. ಶಾಖೆಗಳಾಗಿ ದುರುಪಯೋಗ ಪಡಿಸಿಕೊಳ್ಳುವುದನ್ನು ಮರೆಮಾಚಲುಎಲ್.ಡಿ ಎಫ್. ಸರ್ಕಾರದ ವಿರುದ್ಧ ದೂಷಣೆ ಹೊರಿಸುತ್ತಿದೆ. ಈಗ ಸ್ಥಳೀಯ ಚುನಾವಣೆಗಳಲ್ಲಿ ಕಾಂಗ್ರೆಸ್(ಐ) ಜತೆಗೆ ಶಾಮೀಲಾಗುತ್ತಿದೆ. ಬಿ.ಜೆ.ಪಿ.ಯ ಆರ್.ಎಸ್.ಎಸ್, ಮಹಾರಾಷ್ಟ್ರದಲ್ಲಿ ಶಿವಸೇನೆಯ ಆಕ್ರಾಮಕ ಹಿಂದೂ ಸಂಕುಚಿತವಾದೀ ಚಟುವಟಿಕೆಗಳು, ವಿಶ್ವ ಹಿಂದೂಪರಿಷದ್, ಜಮಾತೇಇಸ್ಲಾಮಿ ಮುಂತಾದ ಕೋಮು ಸಂಘಟನೆಗಳ ದೇಶವ್ಯಾಪೀ ಕೋಮು ಪ್ರಚಾರದ ವಿರುದ್ಧ ದೇಶದ ಐಕ್ಯತೆ ಬಯಸುವ ಎಲ್ಲಾ ಎಡ ಹಾಗೂ ಜಾತ್ಯಾತೀತ ಪಕ್ಷಗಳು ದೃಢವಾಗಿ ನಿಲ್ಲಬೇಕೆಂದು ಸಕೇಂದ್ರ ಮಿತಿ ಕರೆ ನೀಡಿದೆ.

ಇದೇ ಸಮಯದಲ್ಲಿ ಒಂದುನಿರ್ದಿಷ್ಟ ರಾಜ್ಯದಲ್ಲಿನ ತಮ್ಮದೇ ಸಾಮಾಜಿಕ-ಸಾಂಸ್ಕೃತಿಕ ಸ್ವಂತಿಕೆ ಹೊಂದಿರುವ ಜನಾಂಗೀಯ ಗುಂಪುಗಳಿಗೆ ಆ ರಾಜ್ಯದೊಳಗಡೆ ಸ್ವಾಯತ್ತತೆ ನೀಡಬೇಕೆಂಬ ಸಿಪಿಐ(ಎಂ)ನ ಸುಪರಿಚಿತನಿಲುವನ್ನು ಕೇಂದ್ರ ಸಮಿತಿಯು ಹೇಳಿಕೆ ಮತ್ತೊಮ್ಮೆ ಒತ್ತಿ ಹೇಳಿದೆ.

ಪಂಜಾಬ್ ಕುರಿತು

ಪಂಜಾಬಿನಲ್ಲಿ ಪರಿಸ್ಥಿತಿ ಇನ್ನಷ್ಟು ಹದಗೆಡುತ್ತಿರುವುದರ ಬಗ್ಗೆ ತೀವ್ರ ಆತಂಕ ವ್ಯಕ್ತ ಪಡಿಸಿದ ಕೇಂದ್ರ ಸಮಿತಿ ಸರ್ಕಾರ ನಿಷ್ಕ್ರಿಯತೆಯ ಹಾಗೂ ಕೇವಲ ಆಡಳಿತಾತ್ಮಕ ಕ್ರಮಗಳ ಧೋರಣೆಯನ್ನು ತ್ಯಜಿಸಿ ಜೋಧಪುರಬಂದಿಗಳ ಬಿಡುಗಡೆ, 1984ದೆಹಲಿ ಕೊಲೆಗಳಿಗೆ ಕಾರಣರಾಗಿರುವವರೆಂದು ಸಾಬೀತಾಗಿರುವವರಿಗೆ ಶಿಕ್ಷೆ ಹಾಗೂ ಪ್ರಾದೇಶಿಕ ವಿವಾದಗಳಿಗೆ ಪರಿಹಾರದ ಮೂಲಕ ರಾಜಕೀಯ ಪರಿಹಾರಕಂಡು ಹಿಡಿಯಬೇಕೆಂದು ಮತ್ತೊಮ್ಮೆ ಒತ್ತಾಯಿಸಿ ರಾಷ್ಟ್ರೀಯ ಐಕ್ಯತೆಯ ಮೇಲೆ ನೇರ ಪರಿಣಾಮ ಬೀರುವ ಈ ಸಮಸ್ಯೆಯ ಪರಿಹಾರಕ್ಕಾಗಿ ದೇಶವ್ಯಾಪೀ ಆಂದೋಲನ ನಡೆಸುವ ಬಗ್ಗೆ ಇತರ ಪಕ್ಷಗಳೊಡನೆ ಸಮಾಲೋಚನೆ ನಡೆಸಲು ನಿರ್ಧರಿಸಿದೆ.

ಡಾರ್ಜಲಿಂಗ್ ಬೆಳವಣಿಗೆಗಳನ್ನು ಪರಾಮರ್ಶಿಸಿದ ಕೇಂದ್ರ ಸಮಿತಿ ನೇಪಾಳೀ ಭಾಷೆಯಾಡುವ ಜನರ ನಿಜವಾದ ತೊಂದರೆಗಳನ್ನು ನಿವಾರಿಸಲು ಎಡರಂಗ ಸರ್ಕಾರ ಸರ್ವಪ್ರಯತ್ನ ನಡೆಸಿದರೂ ಜಿ.ಎನ್.ಎಲ್.ಎಫ್, ಮಾತಿಗೆ ತಪ್ಪಿದುದರಿಂದಾಗಿ ಆ ಪ್ರಯತ್ನ ಇದುವರೆಗೆ ಫಲಕಾರಿಯಾಗಿಲ್ಲ ಎಂದು ಗಮನಿಸಿದೆ. ಜಿ ಎನ್ ಎಲ್ ಎಫ್. ಹಿಂಸಾಚಾರದಿಂದಾಗಿ ನಾಗರಿಕ ರಕ್ಷಣೆಗಾಗಿ ಹಾಗೂ ಆಡಳಿತಸರಿಯಾಗಿ ನಡೆಯುವಂತೆ ಮಾಡಲು ರಾಜ್ಯ ಸರ್ಕಾರ ಕೆಲವು ಕ್ರಮಗಳನ್ನು ಕೈಗೊಳದೆ ನಿರ್ವಾಹಕವಿಲ್ಲದಂತಾಗಿದೆ. ಜಿ ಎನ್ ಎಲ್ ಎಫ್ ಹಿಂಸಾಚಾರ ನಿಲ್ಲಿಸಿ ಪರಸ್ಪರ ಒಪ್ಪಂದವೊಂದಕ್ಕೆ ಬರಲು ಯತ್ನಿಸುವುದೆಂಬ ಆಶಯವನ್ನು ಕೇಂದ್ರ ಸಮಿತಿ ವ್ಯಕ್ತ ಪಡಿಸಿದೆ.

ಮುಂಬರುವ ಚುನಾವಣೆಗಳು

ತ್ರಿಪುರಾದ ಮುಂಬರುವ ವಿಧಾನ ಸಭಾ ಚುನಾವಣೆಗಳು ರಾಷ್ಟ್ರೀಯ ಐಕ್ಯತೆಯ ರಕ್ಷಣೆಯ ಒಂದು ಮಹತ್ವಪೂರ್ಣ ಸಮರ ಬುಡಕಟ್ಟು ಜನಗಳು ಹಾಗೂ ಇತರರ ಐಕ್ಯತೆಯ ರಕ್ಷಕರಾಗಿ ಹಾಗೂ ಜನತೆಯ ಗಮನಾರ್ಹ ಸೇವೆ ಮಾಡಿರುವ ಸಿ ಪಿ ಐ [ಎಂ] ಹಾಗೂ ಎಡರಂಗ ಚುನಾವಣಾ ಹೋರಾಟಕ್ಕಿಳಿದಿದ್ದರೆ,ಹತಾಶಗೊಂಡ ಕಾಂಗ್ರೆಸ್ [ಐ] ಟಿ ಯು ಜೆ ಎಸ್ ಜತೆ ಸೇರಿ ನೀತಿ ಬಾಹಿರ ಪ್ರಯತ್ನ ನಡೆಸುತ್ತಿದೆ.

ಪಶ್ಚಿಮ ಬಂಗಾಳ ಹಾಗೂ ಕೇರಳದಲ್ಲಿ ನಡೆಯಲಿರುವ ಪಂಚಾಯತ್ ಚುನಾವಣೆಗಳೂ ಎಡ ನೇತೃತ್ವದ ಶಕ್ತಿಗಳು ಹಾಗೂ ಕಾಂಗ್ರೆಸ್ [ಐ]ಹಾಗೂ ಮತ್ತಿತರ ಛಿದ್ರಕಾರೀ ಶಕ್ತಿಗಳ ನಡುವೆ ನಡೆಯುತ್ತಿರುವಹೋರಾಟದಅಂಗ ಈ ಚುನಾವಣೆಗಳಲ್ಲಿ ಕಾಂಗ್ರೆಸ್ [ಐ] ಹಾಗೂ ಛಿದ್ರಕಾರೀ ಶಕ್ತಿಗಳ ವಿರುದ್ಧ ದೊಡ್ಡ ಜಯಗಳಿಸುವಲ್ಲಿ ಎಲ್ಲಾ ಪ್ರಜಾಪ್ರಭುತ್ವವಾದೀ ಶಕ್ತಿಗಳು ನೆರವಾಗುತ್ತವೆ ಎಂಬ ಆಶಯವನ್ನು ಕೇಂದ್ರ ಸಮಿತಿ ವ್ಯಕ್ತಪಡಿಸಿದೆ. ●

[6 ನೇ ಪುಟದಿಂದ]

ಯುಕ ಭವಿಷ್ಯ ನಿಧಿ ಆಯುಕ್ತರು ಬೀಡಿ ಮಾಲೀಕರ ಮೇಲೆ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಲಾಯಿತು ಮನವಿ ಸ್ವೀಕರಿಸಿ ಮಾತನಾಡಿದಆಯುಕ್ತರು ಫೆಬ್ರುವರಿ 15 ರಂದು ಜಂಟಿಸಭೆ ಕರೆದುಚರ್ಚೆ ನಡೆಸುವುದಾಗಿ ಭರವಸೆ ನೀಡಿದರು.

ಧಾರವಾಡ-ಹುಬ್ಬಳ್ಳಿ, ರಾಣಿ ಬೆನ್ನೂರು, ಹರಿಹರ, ಹರಪನ ಹಳ್ಳಿಗಳಿಂದ ಸುಮಾರು ಒಂದುಸಾವಿರ ಜನ ಬೀಡಿ ಕಾರ್ಮಿಕರು ಈ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದರು. ಕಾರ್ಮಿಕ ನಾಯಕರಾದ ಕಾ॥ ಎಂ. ಬಿ ಕಟ್ಟಿ, ನಿತ್ಯಾನಂದ ಸ್ವಾಮಿ, ಬಿ. ಪರಶುರಾಮ ಎಂ. ಎಚ್. ಮುಲ್ಲಾ ಹೂರಾ ಬಿ. ಹುಬ್ಬಳ್ಳಿ, ನೇತೃತ್ವ ವಹಿಸಿದ್ದರು.

(1 ನೇ ಪುಟದಿಂದ)

ಮಹಾರಾಷ್ಟ್ರ ಮುಂತಾದದೆಡೆಗಳಲ್ಲಿ ಕ್ಯಾಪಿಟೇಷನ್ ಪಿಡುಗಿದೆಯೆಂದರೆ ಪ.ಬಂಗಾಲದಲ್ಲಿ ನಂಬುವುದಿಲ್ಲ. ಈ ಪದ್ಧತಿ ಅಲ್ಲಿಲ್ಲ. ಕ್ಯಾಪಿಟೇಷನ್ ಶುಲ್ಕ ನೀಡಿದ್ದರ ಆಧಾರದ ಮೇಲೆ ವರನು ವರದಕ್ಷಿಣೆ ಪಡೆಯುವುದು ಜಾರಿಯಲ್ಲಿದೆ. ಈ ಪರಿಸ್ಥಿತಿಯಲ್ಲಿ 12 ನೇ ತರಗತಿವರೆಗೆ ಉಚಿತ ಶಿಕ್ಷಣ ನೀಡುತ್ತಿರುವ ಪ.ಬಂಗಾಲದ ಎಡರಂಗ ಮತ್ತು ತ್ರಿಪುರಾದ ಎಡರಂಗ ಮತ್ತು ಕೇರಳದ ಎಡ ಪ್ರಜಾಪ್ರಭುತ್ವರಂಗ ಸರ್ಕಾರಗಳು, ಪದವಿ ಮಟ್ಟದಲ್ಲಿ ಉಚಿತ ಶಿಕ್ಷಣ ನೀಡಲು ಯೋಚಿಸುತ್ತಿವೆ. ಬಂಗಾಲಿ ಭಾಷೆಯನ್ನು ಪಶ್ಚಿಮಬಂಗಾಲದಲ್ಲಿ ಕಡ್ಡಾಯ ಮಾಡಿದ್ದಾರೆಂದು ಕರ್ನಾಟಕದ ಲೇಖಕರೊಬ್ಬರು ಹೇಳಿದ್ದು ಇದು ಸತ್ಯಕ್ಕೆ ದೂರವಾಗಿದೆ. ಮಾತೃಭಾಷೆಯ ಮಾಧ್ಯಮದಲ್ಲಿ ಶಿಕ್ಷಣ ನೀಡುವುದು ಅತ್ಯಂತ ವೈಜ್ಞಾನಿಕ ಕ್ರಮವಾಗಿದ್ದು ಎಡರಂಗ ಸರ್ಕಾರ ಈ ಧೋರಣೆಗೆ ಬದ್ಧವಾಗಿದೆ. ಆರ್ಥಿಕ ನೀತಿಯಿಂದ ಶಿಕ್ಷಣ ನೀತಿಯನ್ನು ಪ್ರತ್ಯೇಕಿಸಲಾಗದು. ಕೇವಲ ಶ್ರೀಮಂತರಿಗೆಟುಕುವ ಪ್ರಾವೀಣ್ಯತೆಯಕೇಂದ್ರಗಳನ್ನು ತೆರೆಯುವುದು ಸರಿಯಲ್ಲ.

ರಾಜೀವರಕಂಪ್ಯೂಟರೀಕರಣ ಯೋಜನೆಯುಉದ್ಯೋಗಿಗಳನ್ನು ಬೀದಿಗೆಸೆಯುವ ಸಂಚಾಗಿದೆ. 'ರೋಬೋಟ್'ಗಳು ಕಂಪ್ಯೂಟರ್‌ಗಳನ್ನು ನಿಯಂತ್ರಿಸಲು ಕೆಲವೇ ಕೆಲವರನ್ನು ತರಬೇತುಗೊಳಿಸುವ ಉದ್ದೇಶದಿಂದ 'ಪ್ರಾವೀಣ್ಯತೆ ಕೇಂದ್ರ'ಗಳನ್ನು ತೆರೆಯಲಾಗಿದೆ. ವಿದ್ಯಾರ್ಥಿಗಳು ಸ್ವಾತಂತ್ರ ಹೋರಾಟದ ಪರಂಪರೆ ಹೊಂದಿದ್ದು, ತ್ಯಾಗ, ಬಲಿದಾನದಿಂದ ಉತ್ತಮ ಸಮಾಜಕ್ಕಾಗಿ ಹೋರಾಡಿದ್ದಾರೆ. ಎಸ್. ಎಫ್.ಐ. ಏಕಾಂಗಿಯಾಗಿರಲು ಸಾಧ್ಯವಿಲ್ಲ ಪ.ಬಂಗಾಲದಲ್ಲಿ ಶೋಷಿತ ಜನತೆಯ ಪರವಾಗಿ ಎಸ್.ಎಫ್.ಐ. ಹೋರಾಡುತ್ತಿದೆ. ಎಸ್.ಎಫ್.ಐ ವಿದ್ಯಾರ್ಥಿಗಳು ರಕ್ತಮಾರಿ ಮಕ್ಕಳಿಗೆ ಪುಸ್ತಕಕ್ಕೆ, ರಸ್ತೆ ನಿರ್ಮಾಣಕ್ಕೆ ನೆರವು ನೀಡುತ್ತಿದ್ದಾರೆ. ಒಮ್ಮೆ ರಕ್ತದ ಗುಂಪು ಸರಿಯಾಗಿರದೆ ರಕ್ತದಾನ ಮಾಡಲು ವಿಫಲವಾದುದಕ್ಕೆ ಓರ್ವ ವಿದ್ಯಾರ್ಥಿನಿ ಅಳುತ್ತಿದ್ದರು. ಪ್ರಪಂಚದ ಯಾವುದೇ ಭಾಗದಲ್ಲಿ ವಿದ್ಯಾರ್ಥಿಗಳು ಅನ್ಯಾಯದ ವಿರುದ್ಧ ಹೋರಾಡಿದ ಪರಂಪರೆಯಿದೆ. ಕರ್ನಾಟಕದಲ್ಲಿ ಪ್ರಜಾಸತ್ತಾತ್ಮಕ ವಿದ್ಯಾರ್ಥಿಚಳುವಳಿಗೆ ಎಸ್.ಎಫ್.ಐ. ನಾಯಕತ್ವ ನೀಡಬೇಕೆಂದು ಹಾರೈಸಿದರು.

(1 ನೇ ಪುಟದಿಂದ)

ಮುಖಂಡ ಎಸ್.ಸೂರ್ಯನಾರಾಯಣರಾವ್ ಮೊದಲಾದವರು ಭಾಷಣ ಮಾಡಿದರು. ಸ್ವಾಗತ ಸಮಿತಿಯ ಕಾರ್ಯಾಧ್ಯಕ್ಷರಾದ ಸಿ.ಎ.ಪಾಟೀಲರು ಅಧ್ಯಕ್ಷತೆ ವಹಿಸಿದ್ದರು. ಸ್ವಾಗತ ಸಮಿತಿಯ ಅಧ್ಯಕ್ಷರು ಸ್ವಾಗತ ಭಾಷಣ ಮಾಡಿದರು. ಕಾರ್ಯದರ್ಶಿ ಮಾರುತಿ ಮಾನ್ಪಡೆಯವರು ಅಭಿನಂದಿಸಿದರು.

ಸಾರ್ವಜನಿಕ ಸಭೆಯ ಪೂರ್ವದಲ್ಲಿ ಸಮ್ಮೇಳನದ ಸ್ಥಳವಾದ ಜಸ್‌ಬೀರ್ ಸಿಂಗ್ ನಗರ (ಕೊಠಾರಿ ಸಭಾಂಗಣ) ದಿಂದ ಐದು ಸಾವಿರಕ್ಕೂ ಮೀರಿ ವಿದ್ಯಾರ್ಥಿ ಯುವ ಜನರ ಬೃಹತ್ ಮೆರವಣಿಗೆ 5 ಕಿಲೋಮೀಟರ್ ದೂರ ನಗರದಲ್ಲಿ ನಡೆಯಿತು. ಕಾರ್ಮಿಕರೂ-ರೈತರೂ ಈ ಮೆರವಣಿಗೆಯಲ್ಲಿ ಸೇರಿಕೊಂಡು ಹಲವು ಕಡೆಗಳಲ್ಲಿ ಪುಷ್ಪವೃಷ್ಟಿ ಸುರಿಸಿ ಸ್ವಾಗತಿಸಿದರು.. ಐದನೇ ರಾಜ್ಯ ಸಮ್ಮೇಳನದ ಸಂಕೇತವಾಗಿ ಐದು ಕುದುರೆಗಳ ಮೇಲೆ 5 ವಿದ್ಯಾರ್ಥಿಗಳು ಎತ್ತರದ ಧ್ವಜಹಿಡಿದು ಮೆರವಣಿಗೆಯ ಮುಂಭಾದಲ್ಲಿದ್ದರು. ಅವರ ಮುಂದೆ ಕೋಲಾಟ, ಡೊಳ್ಳು ಮೇಳಗಳ ಎಲ್ಲಕ್ಕಿಂತ ಮುಂದೆ ಅಮೆರಿಕನ್ ಸಾಮ್ರಾಜ್ಯಶಾಹಿಯನ್ನು ಸೋಲಿಸುವ ಬೀದಿ ನಾಟಕವೂ ಜನಾಕರ್ಷಕವಾಗಿ ನಡೆಸಲಾಯಿತು. ಮೆರವಣಿಗೆ ಗುಲ್ಬರ್ಗ ನಗರದ ನಾಗರೀಕರಲ್ಲಿ ಹೊಸ ಸ್ಫೂರ್ತಿತುಂಬಿತ್ತು. ●

[3 ನೇ ಪುಟದಿಂದ]

ದಲ್ಲಿರಿಸಲಾಯಿತು. ಜಿಲ್ಲಾ ಪೋಲಿಸ್ ಅಧಿಕಾರಿಗಳಿಗೆ ತಂತಿದೂರು ನೀಡಿದ ರೈತ ಸಂಘದತಾಲೋಕು ಕಾರ್ಯದರ್ಶಿ ಕಾ. ಬಿ. ವಿಷ್ಣುಮೂರ್ತಿಯವರು ಈ ಬಗ್ಗೆ ಚರ್ಚಿಸಲು ಹೋದಾಗ ಭೇಟಿಗೆ ಅವಕಾಶ ನಿರಾಕರಿಸಲಾಯಿತು. ಈ ನ್ಯಾಯ ಬಾಹಿರ ಕೃತ್ಯವನ್ನು ಖಂಡಿಸಿ ಕಾರಣ ಕರ್ತರಾದ ಡಿ ಎಸ್.ಪಿ. ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಲುಒತ್ತಾಯಿಸಿಮಚ್ಚಿನ ಗ್ರಾಮದಿಂದ ಬೆಳ್ತಂಗಡಿಯವರೆಗೆ ಕೆಂಬಾವುಟ ಹಿಡಿದು ಡಿ.ಎಸ್.ಪಿ. ವಿರುದ್ಧ ಘೋಷಣೆ ಕೂಗುತ್ತಾ ಪ್ರತಿಭಟನಾ ಕಾಲ್ನಡೆ ಜಾಥ ನಡೆಸಿ ಪೋಲಿಸ್ ಠಾಣೆ ಎದುರು ಸತ್ಯಾಗ್ರಹ ನಡೆಸಲಾಯಿತು.ರಾಜ್ಯದ ಗೃಹ ಸಚಿವರಿಗೆ ಹಾಗೂ ಬಂಟ್ವಾಳ ಸರ್ಕಲ್ ಇನ್ಸ್‌ಪೆಕ್ಟರ್‌ರಿಗೆ. ಮನವಿ ಸಲ್ಲಿಸಿ ಈ ಕುರಿತು ಕ್ರಮ ಜರುಗಿಸಬೇಕೆಂದು ಒತ್ತಾಯಿಸಲಾಗಿದೆ. ನಂತರ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ರೈತ ಸಂಘದ ನಾಯಕರು ಮಾತನಾಡಿದರು.

Printed & Published by P. Ramachandra Rao on behalf of the Communist Party of India [Marxist] Karnataka State Committee
K. V. Temple Street, Sultanpet, Bangalore-560053 Editorial and Managerial Office : L-56, K. V. Temple Street,
Sultanpet B-53 Phone · 75331 UMA Printers B-53 Editor : P. Ramachandra Rao Managing Editor : N. K. Upadhyaya